ಜಿಕೆವಿಕೆಯಿಂದ ವೀಕೆಂಡ್ ಅಗ್ರಿಕಲ್ಚರ್ ಕೋರ್ಸ್

ವೈಜ್ಞಾನಿಕ ಕೃಷಿ ಪದ್ಧತಿ ಕುರಿತು ಮಾಹಿತಿ | ಪಠ್ಯದ ಜೊತೆಗೆ ಪ್ರಾಯೋಗಿಕ ತರಬೇತಿ | ಪ್ರಗತಿಪರ ರೈತ ಜಮೀನುಗಳಲ್ಲಿ ಪ್ರಾತ್ಯಕ್ಷಿಕೆ ಕಾರ್ಯಕ್ರಮ

■ ತೃಪ್ತಿ ಕುಮ್ರಗೋಡು

ಉದಯವಾಣಿ ಸಮಾಚಾರ

ಬೆಂಗಳೂರು: ನಗರದಲ್ಲಿ ವಾರಪೂರ್ತಿ ಕೆಲಸ ಮಾಡಿ, ವಾರ್‍ಯಾಂತದಲ್ಲಿ ಪಬ್, ಪಾರ್ಟಿ, ಪ್ರವಾಸದ ಮೋಜಿನ ಬದಲಾಗಿ ಒಂದಿಷ್ಟು ಸಮಯವನ್ನು ಕೃಷಿಯಲ್ಲಿ ತೊಡಗಿಸಿಕೊಳ್ಳಲು ಇಚ್ಛಿಸುವವರಿಗೆ ಹಾಗೂ ಉದ್ಯೋಗದ ಜತೆಗೆ ಸಕ್ರಿಯವಾಗಿ ವೈಜ್ಞಾನಿಕ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗಿಸುವ ನಿಟ್ಟಿನಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ 'ವೀಕೆಂಡ್ ಅಗ್ರಿಕಲ್ಚರ್ ತರಬೇತಿ' ಶೀಘ್ರದಲ್ಲಿ ಪ್ರಾರಂಭಿಸಲಿದೆ.

ಕೊರೊನಾ ಬಳಿಕ ಅನೇಕ ಜನರ ನಗರ ಬಿಟ್ಟು ಗ್ರಾಮೀಣ ಭಾಗಕ್ಕೆ ವಲಸೆ ಹೋಗಿದ್ದಾರೆ. ಅವರಲ್ಲಿ ಹೆಚ್ಚಿನವರು ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಇತ್ತೀಚಿನ ದಿನದಲ್ಲಿ ಗ್ರಾಮೀಣ ಭಾಗದಲ್ಲಿ ಜಮೀನು ಖರೀದಿಸಿ ಕೆಲಸದ ಜತೆ ಕೃಷಿಯಲ್ಲಿ ತೊಡಗಿಸಿಕೊಂಡವರ ಸಂಖ್ಯೆ ಹೆಚ್ಚಾಗುತ್ತಿದೆ. ಇವರಲ್ಲಿ ಅನೇಕರಿಗೆ ಕೃಷಿಯ ಬಗ್ಗೆ ಮಾಹಿತಿ

ಸಾಂದರ್ಭಿಕ ಚಿತ್ರ

ಯಿಲ್ಲದೇ, ಕೈ ಸುಟ್ಟುಕೊಳ್ಳುತ್ತಿದ್ದಾರೆ. ಅವರಿಗೆ ವೈಜ್ಞಾನಿಕ ಕೃಷಿಯ ಬಗ್ಗೆ ಮಾಹಿತಿ ಆಸ್ತಕಿಯಿದ್ದರೂ, ಸೂಕ್ತ ಮಾರ್ಗದರ್ಶಕರ ಕೊರತೆ ಕಾಡುತ್ತಿದೆ. ಅಂತಹವರಿಗೆ ಈ ತರಬೇತಿ ಸಹಾಯಕವಾಗಲಿದೆ.

ನವ ಕೃಷಿಕರ ಕಷ್ಟ ಅರಿತ ಜಿಕೆವಿಕೆ ವೈಜ್ಞಾನಿಕ ಹಾಗೂ ಆಧುನಿಕ ಕೃಷಿ ಮಾಹಿತಿ ಪಡೆಯಲು ಬಯಸುವ ವರಿಗಾಗಿಯೇ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ರಾಜ್ಯದಲ್ಲಿ ಮೊದಲ ಬಾರಿಗೆ ವೀಕೆಂಡ್ ಅಗ್ರಿಕಲ್ಚರ್ ತರಬೇತಿ ಕೋರ್ಸ್ ಶೀಘ್ರದಲ್ಲಿ ಪ್ರಾರಂಭಿಸಲಿದೆ. ಪ್ರತಿ ಭಾನುವಾರ ಬೆಳಗ್ಗೆ 10ರಿಂದ ಸಂಜೆ 5ರ ವರೆಗೆ ನಡೆಯಲಿದೆ. ಬೆಳಗ್ಗೆ ಪಠ್ಯದ ವಿಚಾರ ಹಾಗೂ ಮಧ್ಯಾಹ್ನದ ವೇಳೆ ಪ್ರಾಯೋಗಿಕ ತರಬೇತಿ ನೀಡಲಾಗುತ್ತದೆ. ಆಸ್ತಕರು ಆಧುನಿಕ ಹಾಗೂ ವೈಜ್ಞಾನಿಕ ಕೃಷಿ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದುಕೊಂಡು ಸಕ್ರಿಯವಾಗಿ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಅಗತ್ಯವಿರುವ ಮಾಹಿತಿ ಪಡೆದುಕೊಳ್ಳಬಹುದು.

> ಕೃಷಿ ಆಸಕ್ತರಿಗಾಗಿಯೇ ಜಿಕೆವಿಕೆಯಲ್ಲಿ ವೀಕೆಂಡ್ ಅಗ್ರಿಕಲ್ಚರ್ ತರಬೇತಿ ಕೋರ್ಸ್ ಶೀಘ್ರದಲ್ಲಿ ಪ್ರಾರಂಭಿಸಲಾಗುತ್ತದೆ. ಇದರ ಕೆಲಸಗಳ ನಡೆಯುತ್ತಿದೆ. ಈ ತರಬೇತಿಯಿಂದ ಕೃಷಿಯ ಬಗ್ಗೆ ಸ್ಥೂಲವಾದ ಪರಿಚಯವಾಗಲಿದೆ.
>
> ● **ಡಾ.ಎಸ್.ವಿ. ಸುರೇಶ್,** ಕುಲಪತಿ, ಜಿಕೆವಿಕೆ ಬೆಂಗಳೂರು

ತರಗತಿಗೆ ಯಾವ ಜಿಲ್ಲೆಯಿಂದ ಯಾರು ಸಹ ತರಬೇತಿ ಪಡೆಯಬಹುದಾಗಿದೆ.

ಪ್ರಯೋಜನವೇನು?: ತರಬೇತಿ ಎಷ್ಟು ಅವಧಿಯದ್ದು ಎನ್ನುವುದು ಇನ್ನಷ್ಟೇ ನಿರ್ಧಾರವಾಗಬೇಕಿದೆ. ಕೋರ್ಸ್‌ನಿಂದ ನವ್ಯ ಕೃಷಿಕರಿಗೆ ಆಧುನಿಕ ಕೃಷಿ, ಸಮಗ್ರ ಕೃಷಿ, ಕ್ಷೇತ್ರ ವಿನ್ಯಾಸ ಹಾಗೂ ಬೆಳೆಗಳ ಆಯ್ಕೆ ನೀರು ನಿರ್ವಹಣೆ. ಸಮಗ್ರ ರೋಗ, ಕೀಟಾ ನಿರ್ವಹಣೆ, ಕಳೆ ಹತೋಟಿ ಪದ್ಧತಿ, ಬೆಳೆ ಸಂಸ್ಕರಣೆ ಮತ್ತು ಮೌಲ್ಯವರ್ಧನೆ, ಕೃಷಿ ಮಾರುಕಟ್ಟೆ ಕೃಷಿ ಪೂರಕ ಸೇರಿದಂತೆ ಇತರೆ ಸಮಗ್ರ ಕೃಷಿಯ ಬಗ್ಗೆ ಸಂಪೂರ್ಣವಾದ ಮಾಹಿತಿ ಸಿಗಲಿದೆ. ಇದರಿಂದ ಕೃಷಿಯನ್ನು ಲಾಭದಾಯಕವಾಗಿ ಪರಿವರ್ತನೆ ಮಾಡಲು ಸಾಧ್ಯವಿದೆ.

ತರಬೇತಿಯಲ್ಲಿ ಏನಿರಲಿದೆ?

ಹೊಲ ಉಳುಮೆ ವಿಧಾನ, ಬಿತ್ತನೆ, ಮಣ್ಣಿನ ಪರೀಕ್ಷೆ, ಸಾವಯುವಗೊಬ್ಬರ ತಯಾರಿಕೆ(ಎರೆ ಹುಳು), ನೀರಿನ ಸದ್ಬಳಕೆ, ಹನಿ ನಿರಾವರಿ ಪದ್ಧತಿ, ಬೀಜ ಸಂರಕ್ಷಣೆ, ಇಂಗು ಗುಂಡಿ ತೋಡುವುದು, ಔಷಧ ಸಿಂಡಣೆ, ಕಳೆ ಕೀಳುವುದು, ಕಟಾವು, ಗೊಬ್ಬರ ಹಾಕುವುದು, ಮಳೆನೀರು ಕೊಯ್ಲು, ಸಮಗ್ರ ಕೃಷಿ ಪದ್ಧತಿ ಸೇರಿದಂತೆ ವೈಜ್ಞಾನಿಕ ಕೃಷಿ ಪದ್ಧತಿ ಸೇರಿದಂತೆ ಇತರೆ ವಿಚಾರಗಳ ಕುರಿತು ಪ್ರಾಯೋಗಿಕವಾಗಿ ತರಬೇತಿಯನ್ನು ನೀಡಲಾಗುತ್ತದೆ. ಪ್ರಗತಿ ಪರ ರೈತರ ಜಮೀನಿಗೆ ತೆರಳಿ ಅವರಿಂದ ಮಾಹಿತಿ ಪಡೆಯಲು ಬೇಕಾದ ಅನುಕೂಲವನ್ನು ಸಹ ಕಲ್ಪಿಸಲಿದ್ದಾರೆ. ಈ ವೈಜ್ಞಾನಿಕ ತರಬೇತಿ ಪಡೆದವರು ಕೃಷಿಯಲ್ಲಿ ಯಾವುದೇ ಯಶಸ್ವಿಯಾಗವಹುದು ಎನ್ನುವ ಅಭಿಪ್ರಾಯ ವ್ಯಕ್ತವಾಗಿದೆ.

24-06-2024
Hosa Digantha Pg.08

ಕೃಷಿ ಇಲಾಖೆ 600 ಹುದ್ದೆಗಳ ನೇಮಕ ಶೀಘ್ರ

ಮಾಗಡಿ: ಕೃಷಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ 600 ನೌಕರರನ್ನು ಶೀಘ್ರ ನೇಮಕ ಮಾಡುವುದಾಗಿ ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು. ಪಟ್ಟಣದಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಲೋಕೇಶ್ ನೇತೃತ್ವದಲ್ಲಿ ನೂರಾರು ರೈತರು ನೀಡಿದ ಮನವಿಗೆ ಸ್ಪಂದಿಸಿದ ಅವರು, ಕೃಷಿ ಇಲಾಖೆಯಲ್ಲಿ 20 ವರ್ಷದಿಂದ ನೌಕರರ ಸಮಸ್ಯೆ ಕಾಡುತ್ತಿದೆ. ಕೃಷಿ ಇಲಾಖೆಯಲ್ಲಿ ಶೇ.57, ಇತರ ಇಲಾಖೆಯಲ್ಲಿ ಶೇ.60 ನೌಕರರ ಕೊರತೆ ಇದೆ. ಹಂತ ಹಂತವಾಗಿ ಪ್ರತಿ ವರ್ಷ ನೌಕರರ ಕೊರತೆ ನೀಗಿಸುವ ಕೆಲಸ ಮಾಡಲು ತೀರ್ಮಾನಿಸಿ ಲೋಕಸಭಾ ಚುನಾವಣೆ ಮುನ್ನ 600 ಮಂದಿಯನ್ನು ನೇಮಕ ಮಾಡಿಕೊಳ್ಳಲು ಆರ್ಥಿಕ ಇಲಾಖೆಗೆ ಮುಖ್ಯಮಂತ್ರಿಗಳು ಅನುಮೋದನೆ ನೀಡಿ ಕರ್ನಾಟಕ ಪಬ್ಲಿಕ್ ಸರ್ವೀಸ್ ಕಮಿಷನರ್‌ಗೆ ಬರೆಯಲಾಗಿದೆ. ಇನ್ನೂ 4 ತಿಂಗಳ ಒಳಗೆ ನೇಮಕಾತಿ ಮಾಡಲಾಗುವುದು ಎಂದರು.

24-06-2024
Vijaya Vani Pg.02

ಕನ್ನಡಪ್ರಭ
ಸೋಮವಾರ 24.06.2024

ಪ್ರತಿ ತಿಂಗಳೂ 4ನೇ ಶನಿವಾರ ಕೃಷಿ ಸಂತೆ?

ಇಂದು ಬೆಂಗಳೂರು ಕೃಷಿ ವಿವಿಯ ಸಭೆಯಲ್ಲಿ ಅಂತಿಮ ತೀರ್ಮಾನ | ಜೂ.22ರ ಸಂತೆಗೆ ಸಿಕ್ಕ ಯಶಸ್ಸಿನಿಂದ ಉತ್ತೇಜನ

• ಸಿದ್ದು ಚಿಕ್ಕಬಳ್ಳೇಕೆರೆ
• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಶನಿವಾರ ಆಯೋಜಿಸಿದ್ದ ಪ್ರಪ್ರಥಮ 'ಕೃಷಿ ಸಂತೆ'ಗೆ ಸಿಕ್ಕ ಅಭೂತಪೂರ್ವ ಯಶಸ್ಸಿನಿಂದ ಉತ್ಸಾಹಗೊಂಡಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಪ್ರತಿ ತಿಂಗಳೂ ನಾಲ್ಕನೇ ಶನಿವಾರ ಹೆಬ್ಬಾಳದ ಜಿಕೆವಿಕೆಯಲ್ಲಿ 'ಕೃಷಿ ಸಂತೆ' ನಡೆಸಲು ಚಿಂತನೆ ನಡೆಸಿದೆ.

ಶನಿವಾರ ಬೆಳಗ್ಗೆ 7.30 ರಿಂದ ಮಧ್ಯಾಹ್ನ 12.30 ರವರೆಗೂ ವಿವಿಯ ಇತಿಹಾಸದಲ್ಲೇ ಮೊದಲ ಬಾರಿಗೆ ಆಯೋಜಿಸಿದ್ದ ಸಂತೆಗೆ ರೈತರು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು. ಸುಮಾರು 5 ಸಾವಿರ ಜನರು ಆಗಮಿಸಬಹುದು ಎಂದು ಅಂದಾಜಿಸಲಾಗಿತ್ತಾದರೂ 15 ಸಾವಿರಕ್ಕೂ ಅಧಿಕ ಮಂದಿ ಆಗಮಿಸಿದ್ದು ಬಹುತೇಕ ಉತ್ಪನ್ನಗಳು ಮಧ್ಯಾಹ್ನ 11 ಗಂಟೆಗೆಲ್ಲಾ ಖಾಲಿಯಾಗಿದ್ದವು.

ಇದನ್ನು ಗಮನಿಸಿದ ಕೃಷಿ ಸಚಿವ ಚಲುವರಾಯಸ್ವಾಮಿ ಅವರು ಆಗಾಗ್ಗೆ ಸಂತೆ ಆಯೋಜಿಸುವಂತೆ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ಅವರಿಗೆ ಸಲಹೆ ನೀಡಿದ್ದರು. ಇದನ್ನು ಗಂಭೀರವಾಗಿ ಪರಿಗಣಿಸಿದ ಕುಲಪತಿಗಳು ಪ್ರತಿ ತಿಂಗಳು ನಾಲ್ಕನೇ ಶನಿವಾರ ಬೆಳಗ್ಗೆಯಿಂದ ಸಂಜೆ 5 ಗಂಟೆಯವರೆಗೂ 'ಕೃಷಿ ಸಂತೆ' ಆಯೋಜಿಸಲು ಮುಂದಾಗಿದ್ದು, ಜೂ.24ರಂದು ನಡೆಯುವ ಸಭೆಯಲ್ಲಿ ಸ್ಪಷ್ಟ ಚಿತ್ರಣ ಹೊರಬರಲಿದೆ.

ಜೂ.22ರಂದು ಜಿಕೆವಿಕೆಯಲ್ಲಿ ನಡೆದ ಕೃಷಿ ಸಂತೆಯಲ್ಲಿ ಸೇರಿದ್ದ ಜನರು ಖರೀದಿಯಲ್ಲಿ ತೊಡಗಿರುವುದು.

ರೈತರು, ಎಫ್‌ಪಿಒಗೂ ಅವಕಾಶ: ಕೃಷಿ ವಿವಿಯ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನ, ತಂತ್ರಜ್ಞಾನಗಳನ್ನಷ್ಟೇ ಶನಿವಾರ ಪ್ರದರ್ಶಿಸಿ ಮಾರಾಟಕ್ಕಿಡಲಾಗಿತ್ತು. ಆದರೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರಿಂದ ರೈತರು ಮತ್ತು ರೈತ ಉತ್ಪಾದಕ ಸಂಸ್ಥೆ(ಎಫ್‌ಪಿಒ)ಗಳೂ ತಮ್ಮ ಉತ್ಪನ್ನಗಳನ್ನು ತೆಗೆದುಕೊಂಡು ಬಂದು ವ್ಯಾಪಾರ ನಡೆಸಲು ಮುಕ್ತ ಅವಕಾಶ ನೀಡುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ತಿಳಿದು ಬಂದಿದೆ.

▪ ರೈತರು, ರೈತ ಉತ್ಪಾದಕ ಸಂಸ್ಥೆಗಳಿಗೂ ಸಂತೆಗೆ ಮುಕ್ತ ಅವಕಾಶ ಸಾಧ್ಯತೆ
▪ ಬೆಳಗಿನಿಂದ ಸಂಜೆಯವರೆಗೂ ಜಿಕೆವಿಕೆಯಲ್ಲಿ ಸಂತೆ ನಡೆಸಲು ಚರ್ಚೆ

> ಪ್ರತಿ ತಿಂಗಳೂ 'ಕೃಷಿ ಸಂತೆ' ಆಯೋಜಿಸಬೇಕು. ರೈತರು, ರೈತ ಉತ್ಪಾದಕ ಸಂಸ್ಥೆಗಳಿಗೂ ಅವಕಾಶ ನೀಡಬೇಕು. ಇದರಿಂದ ರೈತರು ಮತ್ತು ಗ್ರಾಹಕರಿಗೂ ಅನುಕೂಲವಾಗಲಿದೆ ಎಂದು ಕೃಷಿ ವಿವಿ ಕುಲಪತಿಗಳಿಗೆ ಸೂಚನೆ ನೀಡಲಾಗಿದೆ.
>
> • **ಎನ್.ಚಲುವರಾಯಸ್ವಾಮಿ** ಕೃಷಿ ಸಚಿವ

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕೃಷಿ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ್ ಅವರು, 'ಜಿಕೆವಿಕೆಯ ಸುತ್ತಮುತ್ತಲ ಪ್ರದೇಶಗಳ ಜನರು ಮಾತ್ರ ಸಂತೆಗೆ ಆಗಮಿಸಬಹುದು ಎಂದು ನಾವು ಅಂದಾಜಿಸಿದ್ದೆವು. ಆದರೆ ದೂರದ ಪ್ರದೇಶಗಳಿಂದಲೂ ಆಗಮಿಸಿದ್ದಾರೆ. ನಾವು ಊಹಿಸಿದ್ದಕ್ಕಿಂತ ಮೂರು ಪಟ್ಟು ಅಧಿಕ ಜನರು ಆಗಮಿಸಿರುವುದು ಪ್ರತಿ ತಿಂಗಳೂ ಸಂತೆ ಆಯೋಜಿಸಲು ಉತ್ತೇಜನ ನೀಡಿದಂತಾಗಿದೆ' ಎಂದು ಸ್ಪಷ್ಟಪಡಿಸಿದರು.

'ಕಡಿಮೆ ಜನರು ಆಗಮಿಸಬಹುದು ಎಂದು ನಾವು ಗಣಪತಿ ದೇವಸ್ಥಾನದ ಹತ್ತಿರ ಸಂತೆ ಆಯೋಜಿಸಿದ್ದೆವು. ಆದರೆ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಕೃಷಿ ಮೇಳ ಆಯೋಜನೆಯಾಗುವ ವಿಶಾಲವಾದ ಸ್ಥಳದಲ್ಲಿ ಸಂತೆಗೆ ವ್ಯವಸ್ಥೆ ಮಾಡಲಾಗುವುದು. ಕೃಷಿ ಸಚಿವ ಚಲುವರಾಯಸ್ವಾಮಿ ಅವರೂ ಈ ಬಗ್ಗೆ ಸೂಚನೆ ನೀಡಿದ್ದಾರೆ. ಜೂ.24ರಂದು ಸಭೆ ನಡೆಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಸುರೇಶ್ ತಿಳಿಸಿದರು.

Don't offer bonus over MSP fixed by Centre for paddy, states told

Dipak.Dash@timesgroup.com

New Delhi: The Commission for Agricultural Costs and Prices (CACP), which recommends MSP for different agri produce, has urged states not to announce bonus over the MSP fixed by the Centre for paddy as this "distorts the market". The recommendations have come at a time when several states are offering bonus over MSP or political parties have made this poll promise before getting elected.

CACP made these recommendations in its latest 'Price Policy for Kharif Crops' report, which contains MSP for summer crops. It has recommended that procurement of rice and wheat should be restricted in those states that impose high charges and pay bonus, in order to bring parity among states.

"The unsustainable and uneconomical practice of offering bonus over and above the MSP for paddy procurement by state govts creates distortions in the market," CACP said. The report referred to how Karnataka, Kerala, Tamil Nadu, Jharkhand, West Bengal and Maharashtra have declared a bonus for paddy in the past. Chhattisgarh last season announced to purchase paddy at Rs 3,100 a quintal against the MSP of Rs 2,183 a quintal for the current marketing season (Oct-Sep). BJP in its manifesto for Odisha had promised to buy paddy at Rs 3,100 per quintal while the Centre recently announced MSP of Rs 2,300 for the 2024-25 season.

24-06-2024
Times of India Pg.07

ಬೆಲ್ಲದ ಚಹಾ, ಆರೋಗ್ಯ ಸದಾ!

ಆಹಾರವೇ ವೈದ್ಯ

ಹಿಂದೆಲ್ಲಾ ಕಾಫಿ, ಚಹಾಕ್ಕೆ ಸಕ್ಕರೆಯ ಬದಲು ಬೆಲ್ಲವನ್ನೇ ಬಳಸುತ್ತಿದ್ದರು. ಆಗೆಲ್ಲಾ ಸಕ್ಕರೆಯ ಬಳಕೆ ಕಡಿಮೆ ಇದ್ದುದೇ ಇದಕ್ಕೆ ಕಾರಣ. ಆದರೆ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಕ್ಕರೆಗಿಂತ ಬೆಲ್ಲವೇ ಅತ್ಯುತ್ತಮ. ಬೆಲ್ಲವು ಕಬ್ಬಿಣ, ಮೆಗ್ನೀಸಿಯಮ್ ಮತ್ತು ಪೊಟ್ಯಾಸಿಯಮ್‌ನಂತಹ ಖನಿಜಗಳಿಂದ ಸಮೃದ್ಧವಾಗಿದೆ ಮತ್ತು ಇದು ಉತ್ಕರ್ಷಣ ನಿರೋಧಕಗಳನ್ನು ಸಹ ಹೊಂದಿದೆ. ಚಳಿಗಾಲದಲ್ಲಿ ಬೆಲ್ಲದ ಚಹಾವನ್ನು ಕುಡಿಯುವುದು ಪ್ರಯೋಜನಕಾರಿ. ಇದು ಶೀತ ವಾತಾವರಣದಲ್ಲಿ ದೇಹದ ಉಷ್ಣತೆಯನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ.

ಆರೋಗ್ಯಕರ ಅಂಶಗಳು

- **ರೋಗನಿರೋಧಕ ಶಕ್ತಿಯ ವೃದ್ಧಿ;** ಬೆಲ್ಲದ ಚಹಾವು ಸತು ಮತ್ತು ಸೆಲೆನಿಯಂನಂತಹ ಅಗತ್ಯವಾದ ಖನಿಜಗಳನ್ನು ಹೊಂದಿರುತ್ತದೆ, ಇದು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಬಲವಾದ ಪ್ರತಿರಕ್ಷಣಾ ವ್ಯವಸ್ಥೆಯು ದೇಹವನ್ನು ವಿವಿಧ ಸೋಂಕುಗಳು ಮತ್ತು ರೋಗಗಳಿಂದ ರಕ್ಷಿಸುತ್ತದೆ.
- **ದೇಹದ ಉಷ್ಣತೆ ಕಾಪಾಡುವುದು;** ಬೆಲ್ಲದ ಚಹಾವು ಚಳಿಗಾಲದಲ್ಲಿ ಸೇವಿಸಲು ಅತ್ಯುತ್ತಮ ಪಾನೀಯವಾಗಿದೆ. ಇದು ದೇಹವನ್ನು ಬೆಚ್ಚಗಿಡಲು ಸಹಾಯ ಮಾಡುತ್ತದೆ ಮತ್ತು ಶೀತ ಮತ್ತು ಕೆಮ್ಮಿನಿಂದ ತ್ವರಿತ ಪರಿಹಾರವನ್ನು ನೀಡುತ್ತದೆ.
- **ಉಸಿರಾಟದ ತೊಂದರೆಯ ನಿವಾರಣೆ;** ಬೆಲ್ಲದ ಚಹಾವು ಕಫ ನಿವಾರಣಾ ಗುಣಗಳಿಗೆ ಹೆಸರುವಾಸಿಯಾಗಿದೆ, ಇದು ಗಂಟಲಿನಲ್ಲಿರುವ ಕಫವನ್ನು ನಿವಾರಿಸಲಿದೆ. ಆಸ್ತಮಾ, ಬ್ರಾಂಕೈಟಿಸ್ ಮತ್ತು ಕೆಮ್ಮಿನಂತಹ ಉಸಿರಾಟದ ಸಮಸ್ಯೆಗಳಿಂದ ಪರಿಹಾರ ನೀಡುತ್ತದೆ.
- **ದೇಹವನ್ನು ನಿರ್ವಿಷಗೊಳಿಸುತ್ತದೆ;** ಬೆಲ್ಲದ ಚಹಾದಲ್ಲಿರುವ ಉತ್ಕರ್ಷಣ ನಿರೋಧಕಗಳು ವಿಷ ಮತ್ತು ಕಲ್ಮಶಗಳನ್ನು ತೆಗೆದುಹಾಕುವ ಮೂಲಕ ದೇಹವನ್ನು ನಿರ್ವಿಷಗೊಳಿಸಲು ಸಹಾಯ ಮಾಡುತ್ತದೆ. ಇದು ಯಕೃತ್ತನ್ನು ಶುದ್ಧೀಕರಿಸುತ್ತದೆ ಮತ್ತು ಒಟ್ಟಾರೆ ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ.
- **ರಕ್ತದೊತ್ತಡದ ನಿಯಂತ್ರಣ;** ಇದು ಪೊಟ್ಯಾಸಿಯಮ್ ಅನ್ನು ಹೊಂದಿರುತ್ತದೆ, ಇದು ರಕ್ತದೊತ್ತಡದ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಆರೋಗ್ಯಕರ ರಕ್ತದೊತ್ತಡವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ, ಹೃದಯ ಕಾಯಿಲೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಮಧುಮೇಹಿಗಳಿಗೂ ಬೆಲ್ಲದ ಚಹ ಒಗ್ಗಿಕೊಳ್ಳುತ್ತದೆ.
- **ಜೀರ್ಣಕ್ರಿಯೆಯ ಸುಧಾರಣೆ;** ಜೀರ್ಣಕಾರಿ ಕಿಣ್ವಗಳನ್ನು ಉತ್ತೇಜಿಸುತ್ತದೆ, ಉತ್ತಮ ಜೀರ್ಣಕ್ರಿಯೆಗೆ ಸಹಾಯ ಮಾಡುತ್ತದೆ. ಇದು ಮಲಬದ್ಧತೆ, ಹೊಟ್ಟೆ ಉಬ್ಬುವುದು ಮತ್ತು ಅಜೀರ್ಣದಂತಹ ಜೀರ್ಣಕಾರಿ ಅಸ್ವಸ್ಥತೆಗಳನ್ನು ತಡೆಯುತ್ತದೆ. ★ ಕಬ್ಬಿಣಾಂಶ ಸಮೃದ್ಧ; ಬೆಲ್ಲದ ಚಹಾವು ಕಬ್ಬಿಣಾಂಶದ ಅತ್ಯುತ್ತಮ ಮೂಲ. ಇದು ಕೆಂಪು ರಕ್ತ ಕಣಗಳ ಉತ್ಪಾದನೆಗೆ ಸಹಾಯ ಮಾಡುತ್ತದೆ. ನಿಯಮಿತವಾಗಿ ಸೇವಿಸುವುದರಿಂದ ಕಬ್ಬಿಣದ ಕೊರತೆಯ ರಕ್ತಹೀನತೆಯನ್ನು ತಡೆಯಬಹುದು.
- **ತೂಕ ಇಳಿಸಲು ಸಹಕಾರಿ;** ಬೆಲ್ಲ ನೈಸರ್ಗಿಕ ಸಿಹಿಕಾರಕವಾಗಿದ್ದು ಅದು ಅನಾರೋಗ್ಯಕರ ಸಕ್ಕರೆ ತಿಂಡಿಗಳ ಕಡುಬಯಕೆಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಇದು ಚಯಾಪಚಯವನ್ನು ಸುಧಾರಿಸುತ್ತದೆ ಮತ್ತು ತೂಕವನ್ನು ಇಳಿಸಲು ಸಹಾಯ ಮಾಡುತ್ತದೆ.
- **ಕೀಲು ನೋವಿನ ನಿವಾರಣೆ;** ಬೆಲ್ಲದ ಚಹಾವು ಉರಿಯೂತ ನಿವಾರಣಾ ಗುಣಲಕ್ಷಣಗಳನ್ನು ಹೊಂದಿದೆ, ಇದು ಕೀಲು ನೋವು ಮತ್ತು ಉರಿಯೂತವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ನಿಯಮಿತ ಸೇವನೆಯು ಸಂಧಿವಾತ ಮತ್ತು ಇತರ ಜಂಟಿ-ಸಂಬಂಧಿತ ಸಮಸ್ಯೆಗಳಿಂದ ಪರಿಹಾರವನ್ನು ನೀಡುತ್ತದೆ.
- **ನೈಸರ್ಗಿಕ ಎನರ್ಜಿ ಬೂಸ್ಟರ್;** ಕಾರ್ಬೋಹೈಡ್ರೇಟ್‌ಗಳಿಂದ ತುಂಬಿದ್ದು ದೇಹಕ್ಕೆ ತ್ವರಿತ ಶಕ್ತಿಯನ್ನು ನೀಡುತ್ತದೆ. ಇದು ಅತ್ಯುತ್ತಮ ನೈಸರ್ಗಿಕ ಶಕ್ತಿ ಬೂಸ್ಟರ್ ಆಗಿದೆ. ವಿಶೇಷವಾಗಿ ಚಳಿಗಾಲದಲ್ಲಿ ದೇಹಕ್ಕೆ ಹೆಚ್ಚಿನ ಉಷ್ಣತೆ ಮತ್ತು ಶಕ್ತಿಯ ಅಗತ್ಯವಿರುವಾಗ ಇದು ಔಷಧಿಯಂತೆ ಕೆಲಸ ಮಾಡುತ್ತದೆ.

24-06-2024
Vishwa Vani Pg.11

ತರಕಾರಿಗಳ ಹೆಸರು	ಹಿಂದಿನ ಬೆಲೆ	ಇಂದಿನ ಬೆಲೆ
ನಾಟಿ ಬೀನ್ಸ್	120	180
ಟೊಮೇಟೊ	100	80
ಬಿಳಿ ಬದನೆ	100	100
ಮೆಣಸಿನಕಾಯಿ	80	100
ನುಗ್ಗೆಕಾಯಿ (ಕೆಜಿ)	240	240
ಗಜ್ಜರಿ	80	85
ನವಿಲುಕೋಸು	80	110
ಮೂಲಂಗಿ	70	70
ಹೀರೆಕಾಯಿ	80	85
ಆಲೂಗಡ್ಡೆ	40	50
ಈರುಳ್ಳಿ	54	60
ಕ್ಯಾಪ್ಸಿಕಂ	60	108
ಹಾಗಲಕಾಯಿ	60	80
ಕೊತ್ತಂಬರಿ ಸೊಪ್ಪು (ಕಟ್)	40	100
ಶುಂಠಿ	160	198
ಬೆಳ್ಳುಳ್ಳಿ	220	338
ಪಾಲಕ್ (ಕಟ್)	50	50
ಪುದಿನ (ಕಟ್)	130	130

ಟೊಮೇಟೊ ತುಟ್ಟಿ । ಬೆನ್ನಲ್ಲೇ ಈರುಳ್ಳಿ ದರ ಏರಿಕೆ
ಶತಕ ಬಾರಿಸಿದ ಕೊತ್ತಂಬರಿ ಕಟ್ಟು । ಗ್ರಾಹಕರಿಗೆ ಬಿಸಿ

ತರಕಾರಿ ಬಲು ದುಬಾರಿ

ಬೆಂಗಳೂರು: ಒಂದು ವಾರದ ಹಿಂದೆ ಟೊಮೆಟೊ ಬೆಲೆ ಶತಕ ಬಾರಿಸಿತ್ತು. ಇದೀಗ ಸ್ವಲ್ಪ ಬೆಲೆ ಕಡಿಮೆಯಾಗಿದೆ. ಆದರೆ ಈರುಳ್ಳಿ ಬೆಲೆ ಸದ್ದಿಲ್ಲದೆ ಏರಿಕೆಯಾಗುತ್ತಿದೆ. ಟೊಮೆಟೊ ಜೊತೆ ಜೊತೆಗೆ ಈರುಳ್ಳಿಯ ಬೆಲೆ ಏರಿಕೆಯಾಗುತ್ತಿದ್ದು, ಒಂದು ಕೆಜಿ ಈರುಳ್ಳಿಯ ಬೆಲೆ ಕೆಆರ್ ಮಾರುಕಟ್ಟೆಯಲ್ಲಿ 55 ರೂ. ಆಗಿದೆ. ಹೊರಗಡೆ 60 ರೂ. ಇದೆ.

ಬೇಡಿಕೆಗೆ ತಕ್ಕಷ್ಟು ಈರುಳ್ಳಿ ಬರುತ್ತಿಲ್ಲ, ಹೀಗಾಗಿ ಮುಂದಿನ ದಿನಗಳಲ್ಲಿ ಈರುಳ್ಳಿ ಬೆಲೆ 100 ರ ಗಡಿ ದಾಟುವ ಸಾಧ್ಯತೆ ಇದೆ. ಅಲ್ಲದೇ. ರಾಜ್ಯಕ್ಕೆ ಮುಂಗಾರು ಅವಧಿಗೂ ಮುನ್ನ ಪ್ರವೇಶಿಸಿದ್ದರಿಂದ ಈರುಳ್ಳಿ ಬೆಳೆ ನಾಶವಾಗಿದೆ. ಹೀಗಾಗಿ ರಾಜ್ಯದ ಗೋಡೌನ್‌ನಲ್ಲಿ ಈರುಳ್ಳಿ ಕಡಿಮೆ ದಾಸ್ತಾನು ಇದೆ. ಹೀಗಾಗಿ ಮುಂದಿನ ದಿನಗಳಲ್ಲಿ ಬೆಲೆ ಏರಿಕೆಯಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ಜನರು ಈರುಳ್ಳಿ ಸಂಗ್ರಹಿಸಿಕೊಳ್ಳುತ್ತಿದ್ದಾರೆ.

ಬೆಲೆ ಏರಿಕೆಯಿಂದಾಗಿ ಬಡ ಜನರು ರೋಸಿಹೋಗಿದ್ದಾರೆ. ಜೀವನ ಮಾಡುವುದು ಕಷ್ಟ ಇದೆ. ಕಳೆದ ಕೆಲ ದಿನಗಳ ಹಿಂದೆ ಟೋಮೆಟೊ ಬೆಲೆ ಜಾಸ್ತಿಯಾಗಿತ್ತು. ಈ ವಾರ ಈರುಳ್ಳಿಯ ಬೆಲೆ ಜಾಸ್ತಿಯಾಗುತ್ತಿದೆ. ಬರುವ ಕಡಿಮೆ ಸಂಬಳದಲ್ಲಿ ಹೇಗೆ ಜೀವನ ನಡೆಸುವುದು. ತರಕಾರಿಯ ಬೆಲೆ ಕೇಳಿಯೇ ಭಯವಾಗುತ್ತಿದೆ ಎಂದು ಗ್ರಾಹಕರು ಅವಲತ್ತುಕೊಳ್ಳುತ್ತಿದ್ದಾರೆ.

ಒಟ್ಟಿನಲ್ಲಿ, ಮಳೆ ಕಾರಣದಿಂದಾಗಿ ದಿನದಿಂದ ದಿನಕ್ಕೆ ತರಕಾರಿಗಳ ಬೆಲೆ ಜಾಸ್ತಿಯಾಗುತ್ತಲೇ ಇದ್ದು, ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾದರೆ ಟೊಮೆಟೊ ಹಾಗೂ ಈರುಳ್ಳಿಯ ಬೆಲೆ ಮತ್ತಷ್ಟು ದುಬಾರಿಯಾಗಲಿದೆ.

24-06-2024
Samyuktha Kar. Pg.03

ಕಳೆದ ವಾರಕ್ಕಿಂತಲೂ ಈ ವಾರ ತರಕಾರಿಗಳ ಬೆಲೆ 3 ಪಟ್ಟು ಹೆಚ್ಚಳ

ಶತಕ ದಾಟಿದ ಟೊಮೇಟೊ, ಬೆಳ್ಳುಳ್ಳಿ 300

ಬೆಂಗಳೂರು: ತೈಲದರ ಏರಿಕೆಯ ಬಳಿಕ ನಗರದ ಮಾರುಕಟ್ಟೆಗಳಲ್ಲಿ ತರಕಾರಿಗಳ ಬೆಲೆ ದಿಢೀರನೆ ಬಡವರಿಗೆ ಮತ್ತೊಂದು ಬೆಲೆ ಏರಿಕೆಯ ಬಿಸಿ ತಟ್ಟಿದೆ.

ನಗರದಲ್ಲಿ ಟೊಮೇಟೊ ದರ ಶತಕವನ್ನು ದಾಟಿದ್ದರೆ, ಬೀನ್ಸ್ ಇನ್ನೂರು ರು. ದಾಟಿದೆ. ಬೆಳ್ಳುಳ್ಳಿ ಬೆಲೆ 300 ರು. ದಾಟಿದೆ. ಕಳೆದ ವಾರಕ್ಕಿಂತಲೂ ಈ ವಾರ ತರಕಾರಿಗಳ ಬೆಲೆ ಮೂರು ಪಟ್ಟು ಹೆಚ್ಚಳವಾಗಿದೆ. ಇದರಿಮದ ಸಾರ್ವಜನಿಕರು ತರಕಾರಿ ಕೊಳ್ಳಲು ಹಿಂದೆ ಮುಂದೆ ನೋಡಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಕೆಆರ್ ಮಾರುಕಟ್ಟೆ, ಮಲ್ಲೇಶ್ವರ, ಗಾಂಧಿ ಬಜಾರ್, ಹೆಬ್ಬಾಳ ಮಾರುಕಟ್ಟೆ ಸೇರಿದಂತೆ ಎಲ್ಲಾ ಕಡೆಗಳಲ್ಲೂ ತರಕಾರಿ ಬಲು ತುಟ್ಟಿಯಾಗಿದೆ. ಇದರಿಂದ ಜನಸಾಮಾನ್ಯರು ಹೈರಾಣಾಗಿದ್ದಾರೆ.

ರಾಜ್ಯದಲ್ಲಿ ಭಾರೀ ಪ್ರಮಾಣದಲ್ಲಿ ಟೊಮೇಟೋ ಇಳುವರಿಯಲ್ಲಿಮ ಕುಸಿತವಾಗಿದ್ದು, ಈ ಹಿನ್ನೆಲೆ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಹೇಳಲಾಗುತ್ತಿದ್ದು, ಮಂಡ್ಯ, ಕೋಲಾರ, ಕನಕಪುರ, ಕಡೂರು, ಮದ್ದೂರು ಕಡೆಗಳಲ್ಲಿ ಟೊಮೇಟೋ ಇಳುವರಿ ಕುಸಿತವಾಗಿದೆ. ಸದ್ಯ ಮಹಾರಾಷ್ಟ್ರದಿಂದ ಆಮದಾಗುವ ಟೊಮೇಟೊ ನೆಚ್ಚಿಕೊಂಡಿವೆ ಬೆಂಗಳೂರಿನ ಮಾರುಕಟ್ಟೆಗಳು. ಟೊಮೇಟೊ ಜತೆಗೆ ಬೀನ್ಸ್, ಬೆಳ್ಳುಳ್ಳಿ ಸೇರಿದಂತೆ ಇತರೆ ತರಕಾರಿ ದರವೂ ತುಟ್ಟಿಯಾಗಿದೆ. ಮುಂದಿನ ಒಂದು ತಿಂಗಳ ಕಾಲ ದರ ಇದೇ ರೀತಿ ಏರಿಕೆಯಾಗಲಿದೆಯಂತೆ. ಒಂದು ಎಕರೆ ಟೊಮೇಟೊ ಬೆಳೆದಿರುವವರು ಲಕ್ಷಾಧಿಪತಿಗಳಾಗುತ್ತಿದ್ದಾರೆ. ಈರುಳ್ಳಿ ದರ ಕೂಡ ಕಳೆದ ಎರಡು ವಾರದಿಂದ ಹೊಯ್ದಾಟದಲ್ಲಿದ್ದು, ಬಜ್ಜಿ ಮೆಣಸಿನಕಾಯಿ, ಬಿಳಿ ಬದನೆ, ನುಗ್ಗಿಕಾಯಿ, ನವಿಲುಕೋಸು ದರವೂ ಏರುಗತಿಯಲ್ಲೇ ಇದೆ. ಬೀನ್ಸ್ ಕಳೆದ ಹದಿನೈದು ದಿನಗಳಿಂದಲೂ 220 ಆಸುಪಾಸಿನಲ್ಲೇ ಇದೆ. ಉಳಿದಂತೆ ಕೊತ್ತಂಬರಿ ಸೊಪ್ಪು ಒಂದು ಕಂತೆಗೆ 100 ಮುಟ್ಟಿದೆ ಮೆಂತ್ಯ, ಪಾಲಕ್, ಬಸಳೆ, ಸಬ್ಬಸಗಿ ಸೊಪ್ಪುಗಳೆಲ್ಲ ಸಾಮಾನ್ಯ ದಿನಕ್ಕಿಂತ 40– 70ವರೆಗೂ ಬೆಲೆ ಹೆಚ್ಚಿಸಿಕೊಂಡಿವೆ.

ಪ್ರಸ್ತುತ ತರಕಾರಿ ದರ

ಟೊಮೇಟೊ	100 - 130
ಬೀನ್ಸ್	180 - 220
ಬಿಳಿ ಬದನೆ	100
ಬಜ್ಜಿ ಮೆಣಸಿನಕಾಯಿ	80 - 100
ಕ್ಯಾಪ್ಸಿಕಂ	100 - 120
ಮೂಲಂಗಿ	60 - 90
ನುಗ್ಗೇಕಾಯಿ	175 - 190
ಶುಂಠಿ	190 - 260
ಬೆಳ್ಳುಳ್ಳಿ	290 - 360
ಹೀರೇಕಾಯಿ	90 - 120

24-06-2024
Vishwa Vani Pg.02

ವಿನಾಶದ ಅಂಚಿನಲ್ಲಿ ಕಡಲಾಮೆಗಳು

ವಿಜ್ಞಾನ ವಿಸ್ಮಯ

ಕೆ. ನಟರಾಜ್

ಇಂದಿನ ಪೀಳಿಗೆಯ ಎಷ್ಟೋ ಮಕ್ಕಳು ಆಮೆ ಎಂಬ ಪ್ರಾಣಿಯನ್ನು ನೋಡಿಲ್ಲವೆಂದರೆ ಅತಿಶಯೋಕ್ತಿಯಲ್ಲ, ಇನ್ನು ಕೆಲವೇ ದಿನಗಳಲ್ಲಿ ಈ ಆಮೆಯೆಂಬ ಪ್ರಾಣಿ ವಿನಾಶದ ಅಂಚಿಗೆ ತೆರಳಲಿದೆ. ಮುಂದೊಂದು ದಿನ ಈ ಪ್ರಾಣಿಯನ್ನು ಕೇವಲ ಚಿತ್ರಗಳಿಂದ ಮಾತ್ರ ಗುರುತಿಸಬೇಕಾದ ಪರಿಸ್ಥಿತಿ ಬರಬಹುದು.

ಈ ಆಮೆ ಮುದ್ದು-ಮೊದ್ದು ಪ್ರಾಣಿ. ಜತೆಗೆ ಇದರಿಂದ ಯಾರಿಗೂ ಅಪಾಯವಿಲ್ಲ, ಇವು ಬೆನ್ನೆಲುಬನ್ನು ಹೊಂದಿದ್ದು ಗಟ್ಟಿಯಾದ ಚಿಪ್ಪಿನ ಹೊರಕವಚವನ್ನು ಹೊಂದಿವೆ. ಇದು ಬಹುಪಾಲು ಶತ್ರುಗಳಿಂದ ತಮ್ಮನ್ನು ರಕ್ಷಿಸಿಕೊಳ್ಳುವ ಒಂದು ತಂತ್ರಕ್ಕೆ ಸಹಕಾರಿಯಾಗಿದೆ. ಆಮೆಗಳನ್ನು ಪ್ರಮುಖವಾಗಿ ಎರಡು ಗುಂಪುಗಳಾಗಿ ವಿಂಗಡಿಸಬಹುದು. ಅವೆಂದರೆ ಭೂಮಿಯ ಮೇಲೆ ವಾಸಿಸುವ ಆಮೆಗಳು ಮತ್ತು ಸಮುದ್ರಗಳಲ್ಲಿ ವಾಸಿಸುವ ಆಮೆಗಳು, ಆದರೆ ಹೆಚ್ಚಿನ ಆಮೆಗಳು ಸಮುದ್ರವಾಸಿಗಳು. ಬನ್ನಿ, ಇಂಥ ಅಪರೂಪದ ಕಡಲಾಮೆಗಳ ಬಗ್ಗೆ ಇನ್ನಷ್ಟು ತಿಳಿದುಕೊಳ್ಳೋಣ.

- ಈ ಆಮೆಗಳು 'ಡೈನೋಸಾರ್' ಸಂತತಿಯ ಸಮಕಾಲೀನ ಪ್ರಾಣಿಗಳಾಗಿದ್ದು, 1500 ವರ್ಷಗಳ ಇತಿಹಾಸವನ್ನು ಹೊಂದಿವೆ.
- ಹೆಣ್ಣು ಆಮೆ ಒಂದು ಸಲಕ್ಕೆ ಅಬ್ಬಬ್ಬಾ ಎಂದರೆ 30 ಮೊಟ್ಟೆಗಳನ್ನಿಡುತ್ತದೆ. ಆದರೆ, ಆಮೆಗಳು ನೀರಿನಲ್ಲಿ ಮೊಟ್ಟೆಗಳನ್ನು ಇಡುವುದಿಲ್ಲ, ಸಾಮಾನ್ಯವಾಗಿ ಆಮೆ ರಾತ್ರಿ ಹೊತ್ತೇ ಮೊಟ್ಟೆ ಇಡುತ್ತದೆ. ಮೊಟ್ಟೆಗಳನ್ನು ಸಮುದ್ರದ ದಂಡೆಯ ಮರಳಿನಲ್ಲಿ ಇಟ್ಟ ನಂತರ ಮರಳಿನಿಂದ ಮತ್ತು ಇತರೆ ಸಾವಯವ ವಸ್ತುಗಳಿಂದ ಅದನ್ನು ಮುಚ್ಚಿಬಿಡುತ್ತದೆ. ಆಮೆ ಇಟ್ಟ ಮೊಟ್ಟೆಗಳು ಮರಿಯಾಗಿ ಹೊರಬರಲು ಕನಿಷ್ಠ ಆರು ದಿನದಿಂದ ಹಿಡಿದು ಗರಿಷ್ಠ 120 ದಿನಗಳು ಹಿಡಿಯುತ್ತವೆ. ಈ ಕಡಲಾಮೆಗಳ ಮೊಟ್ಟೆಗಳು ಇಂದಿಗೂ ಅನೇಕ ದೇಶಗಳಲ್ಲಿ ಅತ್ಯಂತ ರುಚಿಕರ ಖಾದ್ಯ! ಇದರಿಂದ ಇವುಗಳ ಲೂಟಿ ನಿರಂತರವಾಗಿ ನಡೆದಿದೆ.
- ಇವು ಚಿಕ್ಕ ಮರಿಗಳಾಗಿದ್ದಾಗ ಸಸ್ಯಾಹಾರಿಗಳಾಗಿದ್ದು ಪ್ರಾಯಕ್ಕೆ ಬಂದ ನಂತರ ಮಾಂಸಾಹಾರಿಗಳಾಗುತ್ತವೆ. ಇವುಗಳ ಆಹಾರವೆಂದರೆ ಹುಳು ಹುಪ್ಪಟೆ, ಲಾರ್ವಾ ಇತ್ಯಾದಿ.
- ಈ ಆಮೆಗಳ ಜೀವಿತಾವಧಿ ಸುಮಾರು ಮನುಷ್ಯನ ಜೀವಿತಾವಧಿಗೆ ಸರಿ ಹೊಂದುತ್ತದೆ. ಅಂದರೆ ಇವು ಸುಮಾರು 100 ರಿಂದ 150 ವರ್ಷ ಬದುಕಬಲ್ಲವು.
- ನೆಲದ ಮೇಲಿನ ಕೆಲವು ಬೃಹತ್ ಆಮೆಗಳು 300 ಕೆ.ಜಿ. ಇರುವುದೂ ಉಂಟು. ಇವುಗಳ ಚಲನೆ ಗಂಟೆಗೆ 0.27 ಕಿ.ಮೀ!
- ಆಮೆಗಳು ಇಟ್ಟ ಸುಮಾರು 1000 ಮೊಟ್ಟೆಗಳಲ್ಲಿ ಕೇವಲ ಒಂದು ಅಥವಾ ಎರಡು ಮಾತ್ರ ಮರಿಗಳಾಗಿ ಪ್ರಾಯದ ಹಂತವನ್ನು ತಲುಪುತ್ತವೆ. ಉಳಿದವು ಶಾರ್ಕ್, ಸಮುದ್ರ ಮೀನುಗಳಿಗೆ ಆಹಾರವಾಗಿ ಬಿಡುತ್ತವೆ.
- ಕಡಲಾಮೆಗಳು ಒಮ್ಮೆ ಹೊರಬಂದು ಗಾಳಿಯನ್ನು ಸೇವಿಸಿ ಬಿಟ್ಟರೆ ಸುಮಾರು ಐದು ಗಂಟೆಗಳ ಕಾಲ ಸಾಗರದಲ್ಲಿ ಸಂಚರಿಸಿಕೊಂಡು ಇರಬಲ್ಲವು !
- ಇವು ನೀರಿನಲ್ಲಿ 'ಡೈವಿಂಗ್' ಮಾಡುವಾಗ ತಮ್ಮ ಹೃದಯದ ಬಡಿತವನ್ನು ಸುಮಾರು ನಿಮಿಷಗಳ ಹಾಗೆಯೇ ಹಿಡಿದಿಟ್ಟುಕೊಳ್ಳಬಲ್ಲವು. ಜತೆಗೆ ಸಾಗರದಲ್ಲಿ ಸಾವಿರಾರು ಕಿ.ಮೀ ದೂರ ವಿಹಾರ ನಡೆಸಬಲ್ಲವು. ಹೆಣ್ಣು ಕಡಲಾಮೆಗಳು ಸಾವಿರಾರು ಮೈಲಿಗಳವರೆಗೆ ತಮ್ಮ ವಿನೋದ-ವಿಹಾರಗಳನ್ನು ನಡೆಸಿ ಕೊನೆಗೆ ತಮ್ಮ ಸ್ವಸ್ಥಾನ ತಲುಪಿ ಅಲ್ಲಿ ಮೊಟ್ಟೆಗಳನ್ನುಇಡುತ್ತವೆ.

24-06-2024
Vishwa Vani Pg.11

ಹೊಸ ದಿಗಂತ
ಸೋಮವಾರ, 24 ಜೂನ್ 2024, ಬೆಂಗಳೂರು

ನರ್ಸರಿ ಬೆಳೆಗಾರರಿಗೆ ಭರ್ಜರಿ ಲಾಭ

ಮುಂಗಾರು ಮಳೆಯಿಂದಾಗಿ ನರ್ಸರಿ ಗಿಡಕ್ಕೆ ಬೇಡಿಕೆ| ತೋಟದ ಬೆಳೆಗೆ ರೈತರಲ್ಲಿ ಹೆಚ್ಚಿದ ಆಸಕ್ತಿ

• ಟಿ.ನಾಗರಾಜ್ ತಾವರೆಕೆರೆ

ದಿಗಂತ ವಿಶೇಷ

ತಾವರೆಕೆರೆ: ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದಲ್ಲಿ ಬೀಜ ಹಾಕಿ ಬಿತ್ತನೆ ಮಾಡಿ ವಿವಿಧ ರೀತಿಯ ಗಿಡವನ್ನು ರೈತರಿಗೆ ಮಾರಾಟ ಮಾಡುವರು. ಇದರಿಂದ ರೈತರಿಗೂ ಲಾಭ ನರ್ಸರಿ ಮಾಲೀಕರಿಗೂ ಲಾಭದಾಯಕವಾಗಿರುತ್ತದೆ.

ಹೋಬಳಿ ಸುತ್ತಮುತ್ತ ಅನೇಕ ನರ್ಸರಿಗಳಿವೆ. ನರ್ಸರಿಗಳಿಗೆ ಭಾರಿ ಬೇಡಿಕೆ ಇದೆ. ಈಗ ಮುಂಗಾರು ಮಳೆ ಪ್ರಾರಂಭವಾಗಿರುವುದರಿಂದ ರೈತರು ಕೃಷಿ ಚಟುವಟಿಕೆಗಳ ಜೊತೆಗೆ ತೋಟಗಳಲ್ಲಿ ಅನೇಕ ವಿಧವಾದ ಬೆಳೆಯನ್ನು ಬೆಳೆಯಲು ಅನುಕೂಲವಾಗಿರುತ್ತದೆ. ಆದರೆ, ಬೀಜ ಬಿತ್ತಿ ಬೆಳೆಯಲು ಸರಿಯಾದ ಬಿತ್ತನೆ ಬೀಜ ಸಿಗುತ್ತದೋ ಇಲ್ಲವೋ ಅನುಮಾನ. ಆದ್ದರಿಂದ ನರ್ಸರಿಗಳಲ್ಲಿ ಸುಮಾರು ದಿನ ಕಾಲ ಗೊಬ್ಬರ ಹಾಕಿ [illegible] 3ರಿಂದ 4 ಇಂಚಿನ ತನಕ ಆರೋಗ್ಯವಾಗಿ ಬೆಳೆಸಿ ಕೊಡುತ್ತಾರೆ. ಅದನ್ನು ತೋಟಗಳಿಗೆ ತಂದು ನಾಟಿ ಮಾಡಿ ಒಳ್ಳೆ ಬೆಳೆಯನ್ನು ಬೆಳೆದು ಮಾರಾಟ ಮಾಡುವರು. ಮುಖ್ಯವಾಗಿ ಹೂವು ಟೊಮೆಟೊ, ಜೋಳ, ಪರಂಗಿ, ಮೆಣಸಿನ ಗಿಡ, ಬದನೆ, ದಾಳಿಂಬೆ, ಸಪೋಟ, ಮಾವಿನ ಗಿಡ ಇನ್ನೂ ಹಲವಾರು ರೀತಿಯ ತರಕಾರಿ ಹಾಗೂ ಅನೇಕ ಸಸ್ಯ ವರ್ಗದ ಗಿಡವನ್ನು ನರ್ಸರಿಗಳಲ್ಲಿ ಮಾರಾಟ ಮಾಡುವರು. ಕೆಲವೊಂದು [illegible] ತೋಟಗಾರಿಕೆ ಇಲಾಖೆಯ ನರ್ಸರಿ ಖಾಸಗಿ ನರ್ಸರಿ ಸೇರಿದಂತೆ ಇನ್ನಿತರ ನರ್ಸರಿಯಲ್ಲಿ ಗಿಡವನ್ನು ರೈತರು ಕೊಳ್ಳುವಲ್ಲಿ ಆಸಕ್ತಿ ತೋರುತ್ತಿದ್ದಾರೆ. ಇದಕ್ಕೆ ಕಾರಣ ಸ್ಥಳೀಯ ಗ್ರಾಮ ಪಂಚಾಯಿತಿ ಅರಣ್ಯ ಇಲಾಖೆ ಸಸಿಯನ್ನು ನೀಡುತ್ತಿರುವುದು ವಿಶೇಷವಾಗಿದೆ.

ಮಕ್ಕಳಲ್ಲಿ ಪರಿಸರದ ಬಗ್ಗೆ ಜ್ಞಾನ ವೃದ್ಧಿಸುವುದರ ಜೊತೆಗೆ ಮಳೆಗಾಲದಲ್ಲಿ ಹಾಕಿದ ಗಿಡ ಬೇಗನೆ ಬರುವುದರಲ್ಲಿ ದೊಡ್ಡದಾಗಿರುತ್ತದೆ. ಶಾಲೆಯಲ್ಲಿ ಕೈ ತೋಟದಲ್ಲಿ ಗಿಡ ಬೆಳೆಸಿ ಕೆಲವು ಬೆಳೆಯನ್ನು ಬೆಳೆದು ಶಾಲೆಯಲ್ಲಿ ನ ಬಿಸಿಯೂಟದ ಉಪಯೋಗಕ್ಕೆ ಬಳಸಿಕೊಳ್ಳುತ್ತಾರೆ.

ಗ್ರಾಮ ಪಂಚಾಯಿತಿಯಿಂದ ನರ್ಸರಿಯಲ್ಲಿ ಗಿಡ ಖರೀದಿಸಿ ಸ್ಮಶಾನ ದೇವಸ್ಥಾನ [illegible] ಹಾಗೂ ಇತರ ಸರ್ಕಾರಿ ಜಾಗಗಳಲ್ಲಿ ಗಿಡವನ್ನು ನೆಟ್ಟು ಬೆಳೆಸುವರು. ಇದರಿಂದ ಪರಿಸರ ಉತ್ತಮಗೊಂಡು ಒಳ್ಳೆಯ ವಾತಾವರಣ ಸೃಷ್ಟಿಯಾಗುತ್ತದೆ. ಮನೆಗಳ ಬಳಿ ಅಲಂಕಾರಿಕ ಗಿಡಗಳಿಗೆ ಮತ್ತಷ್ಟು ಬೇಡಿಕೆ ಕಂಡು ಬರುತ್ತದೆ. ಮುಖ್ಯವಾಗಿ ನಿಂಬೆ, ಚಕ್ಕೋತ, ಪಾರಿಜಾತ ದಾಸವಾಳ, ಗುಲಾಬಿ ಹಣ್ಣಿನ ಸಸಿಯಂತು ಬೇಡಿಕೆ ಹೆಚ್ಚಿದೆ. ನರ್ಸರಿಯಲ್ಲಿ ಹಣ್ಣಿನ ಗಿಡ ಸಸಿಯ ಗುಣಮಟ್ಟ ಮತ್ತು ಆಕಾರದಿಂದ ಬೆಲೆ ನಿಗದಿಯಾಗಿದೆ. ರೈತರು ಸಸಿಯನ್ನು ಖರೀದಿ ಮಾಡಲು ನರ್ಸರಿಗಳತ್ತ ಮುಖ ಮಾಡುತ್ತಿದ್ದಾರೆ.

ಬೇಸಿಗೆ ಬೆಳೆಗೆ ಬೇಡಿಕೆ

ಇಷ್ಟು ದಿನ ಬೇಸಿಗೆ ಕಾಲ ಬಿಸಿಲಿನ ತೀವ್ರತೆ ಹೆಚ್ಚಾಗಿದೆ. ರೈತರು ಬೆಳೆ ಬೆಳೆಯಲು ಹಿಂದೇಟು ಹಾಕುತ್ತಿದ್ದರು. ಆದರೆ, ಈಗ ಮಳೆಗಾಲ ಪ್ರಾರಂಭವಾಗಿರುವುದರಿಂದ ನರ್ಸರಿಯಲ್ಲಿ ಬೆಳೆದ ಸಸಿಯನ್ನು ಖರೀದಿಸಲು ಮುಂದಾಗಿದ್ದಾರೆ.

"ಒಂದು ಸಾರಿಗೆ 50 ರಿಂದ 100 ಗಿಡ ಖರೀದಿಸುತ್ತಿದ್ದಾರೆ. ಮಾವು, ಹಲಸು, ಪರಂಗಿ ಗಿಡಗಳಿಗೆ ಹೆಚ್ಚು ಬೇಡಿಕೆ ಇದೆ. ಸಸಿಯ ಬೆಳವಣಿಗೆ ಆಧಾರದಲ್ಲಿ ಬೆಲೆ ನಿಗದಿಗೊಳಿಸಿ ಮಾರಾಟ ಮಾಡಲಾಗುತ್ತಿದೆ. ಕಳೆದ ವರ್ಷಕ್ಕಿಂತ ಈ ವರ್ಷ ಸಸಿಗಳ ಮಾರಾಟ ಬಲು ಜೋರಾಗಿ ನಡೆಯುತ್ತದೆ.

■ ಭರತ್, ನರ್ಸರಿ ಫಾರಂ, ತಾವರೆಕೆರೆ.

24-06-2024
Hosa Digantha Pg.08

ಜನದನಿಯ ಸಾರಥಿ
ವಾರ್ತಾ ಭಾರತಿ
Jun 23, 2024

ಸಿರಿಧಾನ್ಯಗಳ ಪದಾರ್ಥಗಳಿಗೆ ಬೇಡಿಕೆ ಹೆಚ್ಚುತ್ತಿದೆ: ಚಲುವರಾಯಸ್ವಾಮಿ

ಬೆಂಗಳೂರು, ಜೂ.22: ಸಿರಿಧಾನ್ಯಗಳ ಮೌಲ್ಯವರ್ಧಿತ ಪದಾರ್ಥಗಳಿಗೆ ಬೇಡಿಕೆ ಹೆಚ್ಚಾಗುತ್ತಿದ್ದು, ಸರಕಾರವೂ ಸಿರಿಧಾನ್ಯ ಉತ್ಪಾದನೆ, ಮಾರಾಟಕ್ಕೆ ಸಾಕಷ್ಟು ಒತ್ತು ನೀಡುತ್ತಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಶನಿವಾರ ಜಿಕೆವಿಕೆ ಆವರಣದಲ್ಲಿ ಕೃಷಿ ವಿವಿಯು ಆಯೋಜಿಸಿದ್ದ 'ಉತ್ಪನ್ನಗಳ ಸಂತೆ'ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಕಾರ್ಯಕ್ರಮವು ಒಂದು ಪ್ರಾಯೋಗಿಕ ಪ್ರಯತ್ನವಾಗಿದ್ದು ರೈತರು ಸೇರಿ ಸಾರ್ವಜನಿಕರಿಗೆ ಹೆಚ್ಚು ಉಪಯೋಗವಾಗಿದೆ. ಸಂತೆಯಲ್ಲಿ ಕೃಷಿ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನ, ತಾಂತ್ರಿಕತೆಗಳನ್ನು ಪರಿಚಯ ಮಾಡಿಸಲಾಗುತ್ತಿದೆ ಎಂದರು.

ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು ಸಾವಯವ ಉತ್ಪನ್ನಗಳು, ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಇನ್ನೂ ಮುಂತಾದವುಗಳನ್ನು ಈ ಸಂತೆಯನ್ನು ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ ಎಂದು ಅವರು ತಿಳಿಸಿದರು. ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ ಮಾತನಾಡಿ, ರಾಜ್ಯದ ಪ್ರಪ್ರಥಮ ಕೃಷಿ ವಿಶ್ವವಿದ್ಯಾನಿಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ತನ್ನ ಆರು ದಶಕಗಳ ಸುದೀರ್ಘ ಅವಧಿಯಲ್ಲಿ 485 ತಂತ್ರಜ್ಞಾನಗಳು ಹಾಗೂ 328 ತಳಿಗಳನ್ನು ಅಭಿವೃದ್ಧಿಪಡಿಸಿದೆ ಎಂದರು.

ಈ ಸಂದರ್ಭದಲ್ಲಿ ಕೃಷಿ ವಿವಿಯ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

> ಎಲ್ಲ ತಳಿಗಳು ಇಂದಿಗೂ ನಾಡಿನ ಕೃಷಿಕರಲ್ಲಿ ಜನಪ್ರಿಯವಾಗಿದ್ದು ರಾಜ್ಯದ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ. ಇದಲ್ಲದೆ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿರುವ ಹಲವು ಸುಧಾರಿತ ತಳಿಗಳು ರಾಜ್ಯ ಮತ್ತು ರಾಷ್ಟ್ರದ ಗಡಿದಾಟಿದ್ದು 400 ಕ್ವಿಂಟಾಲ್‌ಗಿಂತ ಹೆಚ್ಚು ಸೂರ್ಯಕಾಂತಿ ಬೀಜಗಳನ್ನು ಈಸ್ಟ್ ಆಫ್ರಿಕನ್ ಸೀಡ್ ಲಿಮಿಟೆಡ್ ಕಂಪನಿ ಮೂಲಕ ಆಫ್ರಿಕಾ ದೇಶಗಳಿಗೆ ವಿಶೇಷವಾಗಿ ಉಗಾಂಡಾ ದೇಶಕ್ಕೆ ರಫ್ತು ಮಾಡಲಾಗುತ್ತಿದೆ.
>
> -ಡಾ.ಎಸ್.ವಿ.ಸುರೇಶ,
> ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ

ವಿಜಯವಾಣಿ
ಭಾನುವಾರ 23 ಜೂನ್ 2024
23 JUNE 2024

ಸಿರಿಧಾನ್ಯಗಳ ಮೌಲ್ಯವರ್ಧನೆ

ಜಿಕೆವಿಕೆಯಲ್ಲಿ ಶನಿವಾರ ಆಯೋಜಿಸಿದ್ದ 'ಉತ್ಪನ್ನಗಳ ಸಂತೆ' ಕಾರ್ಯಕ್ರಮವನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉದ್ಘಾಟಿಸಿದರು. ಬೆಂ. ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ಮತ್ತಿತರರಿದ್ದರು.

ಬೆಂಗಳೂರು: ಪ್ರಸ್ತುತ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಇದು ಉತ್ತಮ ಬೆಳವಣಿಗೆಯಾಗಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದ್ದಾರೆ.

ಕೃಷಿ ವಿಶ್ವವಿದ್ಯಾಲಯ ವತಿಯಿಂದ ಗಾಂಧಿ ಕೃಷಿವಿಜ್ಞಾನ ಕೇಂದ್ರದಲ್ಲಿ (ಜಿಕೆವಿಕೆ) ಶನಿವಾರ ಆಯೋಜಿಸಿದ್ದ 'ಉತ್ಪನ್ನಗಳ ಸಂತೆ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

» ಉತ್ಪನ್ನಗಳ ಸಂತೆ ಕಾರ್ಯಕ್ರಮಕ್ಕೆ ಚಾಲನೆ

ವಿವಿಯಿಂದ ಅಭಿವೃದ್ಧಿಪಡಿಸಲಾದ ವಿವಿಧ ತಾಂತ್ರಿಕತೆಗಳ ಉತ್ಪನ್ನ, ಕೃಷಿ ಪರಿಕರಗಳನ್ನು ರೈತರು ಮತ್ತು ಸಾರ್ವಜನಿಕರು ಪರಿಚಯಿಸಲು ಸಂತೆ ಆಯೋಜಿಸಿರುವುದು ಸಂತಸದ ವಿಷಯ. ಇದಕ್ಕಾಗಿ ವಿವಿಗೆ ಅಭಿನಂದನೆ ಸಲ್ಲಿಸಲಾಗುವುದು. ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯ ಮಾರುಕಟ್ಟೆ ವಿಸ್ತಾರವಾಗುತ್ತಿದೆ. ಇದರಿಂದಾಗಿ ಬೆಳೆಗಾರರಿಗೂ ಅನುಕೂಲವಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃಷಿ ಸಂಶೋಧನಾ, ವಿಸ್ತರಣೆ, ಉತ್ಪನ್ನಗಳು, ತಂತ್ರಜ್ಞಾನ, ತಾಂತ್ರಿಕತೆಯನ್ನು ಪರಿಚಯಿಸಲು ಕೃಷಿ ವಿವಿ ಮುಂದಾಗಿರುವ ಕ್ರಮದ ಬಗ್ಗೆ ಸಚಿವರು ಪ್ರಶಂಸೆ ವ್ಯಕ್ತಪಡಿಸಿದರು. ಕೃಷಿ ವಿವಿ ಪ್ರಾಧ್ಯಾಪಕರು, ಅಧ್ಯಾಪಕರು ಸೇರಿ ಮತ್ತಿತರರಿದ್ದರು. ಉತ್ಪನ್ನಗಳ ಸಂತೆಗೆ ಸಾವಿರಾರು ಮಂದಿ ಭೇಟಿ ನೀಡಿ ಮಾಹಿತಿ ಪಡೆದರು. ಐವತ್ತಕ್ಕೂ ಅಧಿಕ ಮಳಿಗೆಗಳನ್ನು ಪ್ರತಿಷ್ಠಾಪಿಸಲಾಗಿತ್ತು.

328 ತಳಿ ಅಭಿವೃದ್ಧಿ: ಆರು ದಶಕಗಳಲ್ಲಿ ಕೃಷಿ ವಿವಿ ಒಟ್ಟು 485 ತಂತ್ರಜ್ಞಾನ, 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲ ತಳಿಗಳು ನಾಡಿನ ಕೃಷಿಕರಲ್ಲಿ ಜನಪ್ರಿಯವಾಗಿದ್ದು, ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿದೆ. ಏಕಗವಾಕ್ಷಿ ಯೋಜನೆಯಡಿ ತಲುಪಿಸಲು ತಾಂತ್ರಿಕತೆ, ಉತ್ಪನ್ನ ತಲುಪಿಸಲು ಸಂತೆ ಆಯೋಜಿಸಲಾಗಿದೆ. 30 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿದ್ದಾರೆ. ಸಂತೆಯನ್ನು ರೈತರು ಸದ್ಬಳಕೆ ಮಾಡಿಕೊಳ್ಳಬೇಕೆಂದು ಕೃಷಿ ವಿವಿ ಕುಲಪತಿ ಡಾ.ಎಸ್.ವಿ. ಸುರೇಶ್ ಸಲಹೆ ನೀಡಿದರು.

'ಉತ್ಪನ್ನಗಳ ಸಂತೆ'ಯಲ್ಲಿ ಗ್ರಾಹಕರಿಂದ ಖರೀದಿ.

ವಿಶ್ವ ವಾರಿಧಿ
23-06-2024, SUNDAY

ಉತ್ಪನ್ನಗಳ ಸಂತೆಯ ಪ್ರಯೋಜನ ಪಡೆದುಕೊಳ್ಳಿ: ಕುಲಾಧಿಪತಿ ಚೆಲುವರಾಯಸ್ವಾಮಿ

ವಿಶ್ವ ವಾರಿಧಿ । ಬೆಂಗಳೂರು

ಕೃಷಿ ವಿಶ್ವವಿದ್ಯಾಲಯ ಪ್ರಸ್ತುತ ದಿನಗಳಲ್ಲಿ ಮೌಲ್ಯ ವರ್ಧನೆಗೆ ಸಾಕಷ್ಟು ಒತ್ತು ಕೊಟ್ಟಿದ್ದು ಕಿನೋವ ಮತ್ತು ರಾಜಗೀರ ಸೇರಿದಂತೆ ವಿವಿಧ ಬೆಳೆಗಳಲ್ಲಿ ಸಿರಿಧಾನ್ಯಗಳಲ್ಲಿನ ಸಮರ್ಥ ಬೆಳೆಗಳಲ್ಲಿ ಮೌಲ್ಯವರ್ಧಿತ ಪದಾರ್ಥಗಳಿಗೆ ಒತ್ತು ನೀಡುತ್ತಿರುವುದು ಉತ್ತಮ ಬೆಳವಣಿಗೆ. ಸಾರ್ವಜನಿಕರು, ರೈತರು ಈ ವಿನೂತನ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಕೃಷಿ ಸಚಿವ ಹಾಗೂ ವಿಶ್ವವಿದ್ಯಾಲಯದ ಸಹ ಕುಲಾಧಿಪತಿ ಚೆಲುವರಾಯಸ್ವಾಮಿ ಹೇಳಿದರು.

ಕೃವಿವಿ, ಜಿ.ಕೆ.ವಿ.ಕೆ ಆವರಣದಲ್ಲಿ ಆಯೋಜಿಸಿದ್ದ "ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಉತ್ಪನ್ನಗಳ ಸಂತೆ" ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಅವರು, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಿದ ವಿವಿಧ ತಾಂತ್ರಿಕತೆಗಳ ಉತ್ಪನ್ನ, ಕೃಷಿ ಪರಿಕರಗಳನ್ನು ಕೃಷಿಕರಿಗೆ ಹಾಗೂ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನಪ್ರಿಯಗೊಳಿಸುವ ಸಲುವಾಗಿ "ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಉತ್ಪನ್ನಗಳ ಸಂತೆ" ಎಂಬ ವಿನೂತನ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಇದು ಒಂದು ಪ್ರಾಯೋಗಿಕ ಪ್ರಯತ್ನವಾಗಿದ್ದು ರೈತರು, ಸಾರ್ವಜನಿಕರ ಹಿತದೃಷ್ಟಿಯಿಂದ ಸರ್ಕಾರದ ಪರವಾಗಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅಭಿನಂದನೆ ಸಲ್ಲಿಸುವುದಾಗಿ ಹೇಳಿದರು.

ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನ, ತಾಂತ್ರಿಕತೆಗಳನ್ನು ಪರಿಚಯ ಮಾಡಿಸುವ ನಿಟ್ಟಿನಲ್ಲಿ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು ಸಾವಯವ ಉತ್ಪನ್ನಗಳು. ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಪ್ರಮುಖವಾಗಿ ತೋಟಗಾರಿಕಾ ಬೆಳಗಳಾದ ಹಣ್ಣುಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು ಹಾಗೂ ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಅಣಬೆ ಮತ್ತು ಜೇನುಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು, ಪಶುಸಂಗೋಪನೆ, ಕೇಕ್ ಪ್ರದರ್ಶನ, ರಾಜಮುಡಿ ಅಕ್ಕಿ, ರಾಸಾಯನಿಕ ಮುಕ್ತ ಬೆಲ್ಲ, ಕೃಷಿ ಪ್ರಕಟಣೆಗಳು ಹಾಗೂ ಇನ್ನೂ ಮುಂತಾದವುಗಳನ್ನು ಈ ಸಂತೆಯನ್ನು ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿದ್ದನ್ನು ಸಚಿವರು ಗಮನಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕೃಷಿ ವಿವಿ ಕುಲಪತಿ ಡಾ. ಎಸ್.ವಿ. ಸುರೇಶ ಅವರು, ಸಂತೆಯಲ್ಲಿ ತರಕಾರಿಗಳ ಸೆಲ್ಫಿ ಪಾಯಿಂಟ್ ವಿಶೇಷ ಆಕರ್ಷಣೆಯಾಗಿತ್ತು. ಇದೇ ಸಂದರ್ಭದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳು, ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಸಹ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

മലയാള മനോരമ
2024 ജൂൺ 23 ഞായർ
www.manoramaonline.com/news

കാർഷിക സർവകലാശാലയുടെ ബെംഗളൂരു ജികെവികെ ക്യാംപസിൽ നടക്കുന്ന കാർഷികോൽപന്ന വിപണന മേളയിൽ പച്ചക്കറി കൊണ്ട് നിർമിച്ച വാതിൽ. സർവകലാശാലയുടെ പ്രവർത്തനങ്ങളെക്കുറിച്ച് കർഷകരിൽ അവബോധം സൃഷ്ടിക്കാൻ ലക്ഷ്യമിട്ടു സംഘടിപ്പിച്ച മേളയിൽ പതിനയ്യായിരത്തിലേറെ പേർ പങ്കെടുത്തു. സർവകലാശാലയിൽ വികസിപ്പിച്ച കാർഷിക ഉൽപന്നങ്ങൾ മേളയിൽ പ്രദർശിപ്പിച്ചു.

ಕನ್ನಡಪ್ರಭ
ಭಾನುವಾರ 23.06.2024

ಕೃಷಿ ವಿವಿ ಮೊದಲ ಸಂತೆಗೆ ಭರ್ಜರಿ ಪ್ರತಿಕ್ರಿಯೆ!

5000 ಜನರ ನಿರೀಕ್ಷಿಸಿದ್ದ ವಿವಿ | 15000 ಜನರು ಆಗಮಿಸಿದ್ದರಿಂದ ಭಾರಿ ವ್ಯಾಪಾರ | ತಿಂಗಳಿಗೊಮ್ಮೆ ಆಯೋಜನೆ?

• ಕನ್ನಡಪ್ರಭ ವಾರ್ತೆ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಪ್ರಥಮ ಬಾರಿಗೆ ಹೆಬ್ಬಾಳದ ಜಿಕೆವಿಕೆಯಲ್ಲಿ ಶನಿವಾರ ಆಯೋಜಿಸಿದ್ದ 'ಕೃಷಿ ವಿವಿ ಉತ್ಪನ್ನಗಳ ಸಂತೆ'ಗೆ ರೈತರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದು ಭರ್ಜರಿ ವಹಿವಾಟು ನಡೆದಿದೆ.

ಕೃಷಿ ವಿವಿ ಮತ್ತು ವಿವಿ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಕೇಂದ್ರಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನ, ತಂತ್ರಜ್ಞಾನಗಳನ್ನು ಕೃಷಿಕರು ಮತ್ತು ಸಾರ್ವಜನಿಕರಿಗೆ ಪರಿಚಯ ಮಾಡಿಸಲು ಆಯೋಜಿಸಿದ್ದ ಸಂತೆಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಸಹಕಾರನಗರ, ಜಕ್ಕೂರು, ಬ್ಯಾಟರಾಯನಪುರ, ವಿದ್ಯಾರಣ್ಯಪುರ, ತಿಂಡ್ಲು, ಯಲಹಂಕ, ಜಾಲಹಳ್ಳಿ, ಸೋಂದಕೊಪ್ಪ ಸುತ್ತಮುತ್ತಲ ಪ್ರದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು ಸಂತೆಗೆ ಆಗಮಿಸಿದ್ದರು. 'ತಿಂಗಳಿಗೊಮ್ಮೆಯಾದರೂ ಸಂತೆಯನ್ನು ಆಯೋಜಿಸಿದರೆ ಉತ್ತಮ' ಎಂಬ ಅಭಿಪ್ರಾಯ ಸಾರ್ವಜನಿಕರು, ಉತ್ಪಾದಕರಿಂದ ವ್ಯಕ್ತವಾಗಿದ್ದು ಕಂಡುಬಂತು.

ಬಿತ್ತನೆ ಬೀಜ, ಸಿರಿಧಾನ್ಯಗಳಿಂದ ತಯಾರಿಸಿದ ಮೌಲ್ಯವರ್ಧಿತ ಉತ್ಪನ್ನಗಳು, ಹಣ್ಣು, ಸುಗಂಧ ಮತ್ತು ಔಷಧೀಯ ಸಸ್ಯಗಳು, ಜೈವಿಕ ಗೊಬ್ಬರ, ಕೃಷಿ ಯಂತ್ರೋಪಕರಣ, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ಅಣಬೆ ಮತ್ತು ಜೇನು ಕೃಷಿ, ರಾಜಮುಡಿ ಅಕ್ಕಿ, ರಾಸಾಯನಿಕ ಮುಕ್ತ ಬೆಲ್ಲ, ಕೃಷಿ ಪ್ರಕಟಣೆ ಮತ್ತಿತರ ವಸ್ತು, ಪದಾರ್ಥಗಳ ಪ್ರದರ್ಶನ ಮತ್ತು ಮಾರಾಟವನ್ನು ಅಚ್ಚುಕಟ್ಟಾಗಿ ವ್ಯವಸ್ಥೆ ಮಾಡಲಾಗಿತ್ತು.

ಹಲಸಿನ ಹಣ್ಣು, ತೆಂಗಿನ ಕಾಯಿ ಮಾರಾಟವೂ ಉತ್ತಮವಾಗಿತ್ತು. ಹಳ್ಳಿಕಾರ್ ಹೋರಿ, ಬನ್ನೂರು ಕುರಿ, ಸ್ವರ್ಣಧಾರ ಕೋಳಿಗಳನ್ನೂ ಕಣ್ತುಂಬಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು. 'ತರಕಾರಿಗಳ ಬೀಜ, ಸಸಿಗಳು, ಕೃಷಿ ವಿವಿಯ ಪ್ರಕಟಣೆಗಳನ್ನೂ ಸಾರ್ವಜನಿಕರು ಖರೀದಿಸಿದರು' ಎಂದು ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರದ ಕಾಲಿನ ವಿವರಿಸಿದರು.

ಜಿಕೆವಿಕೆಯಲ್ಲಿ ಕೃಷಿ ವಿವಿ ಆಯೋಜಿಸಿದ್ದ ಸಂತೆಯಲ್ಲಿ ಭಾಗವಹಿಸಿದ್ದ ಜನರು

> 5 ಸಾವಿರ ಜನರು ಸಂತೆಗೆ ಆಗಮಿಸಬಹುದು ಎಂಬ ನಿರೀಕ್ಷೆ ಇದ್ದು ಪ್ರಾಯೋಗಿಕವಾಗಿ ಆಯೋಜಿಸಲಾಗಿತ್ತು. ಆದರೆ ಸುಮಾರು 15 ಸಾವಿರ ಜನರು ಬಂದಿದ್ದರಿಂದ ಖುಷಿಯಾಗಿದೆ. ಇನ್ನು ಮುಂದೆ ತಿಂಗಳಿಗೊಮ್ಮೆ ಸಂತೆ ಆಯೋಜಿಸಲು ಕ್ರಮ ಕೈಗೊಳ್ಳಲಾಗುವುದು.
> • ಡಾ। ಎಸ್.ವಿ.ಸುರೇಶ
> ಬೆಂಗಳೂರು ಕೃಷಿ ವಿವಿ ಕುಲಪತಿ

ರೇಷ್ಮೆ ಉತ್ಪನ್ನಕ್ಕೆ ಭಾರಿ ಬೇಡಿಕೆ

ರೇಷ್ಮೆಯಿಂದ ತಯಾರಿಸಿದ ಉಪ ಉತ್ಪನ್ನಗಳಿಗೆ ಸಂತೆಯಲ್ಲಿ ಭಾರೀ ಬೇಡಿಕೆ ಇದ್ದುದು ಕಂಡುಬಂತು. ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಚಿಂತಾಮಣಿಯ ಕೃಷಿ ವಿಜ್ಞಾನ ಕೇಂದ್ರದ ಗೃಹ ವಿಜ್ಞಾನ ವಿಜ್ಞಾನಿ ಸೌಮ್ಯಾ ಸಿದ್ದೇಗೌಡರ್, ರೇಷ್ಮೆಯಿಂದ ತಯಾರಿಸಿದ ಬೊಕ್ಕೆ, ಹೂವು, ಹಾರ ಹೆಚ್ಚಿನ ಪ್ರಮಾಣದಲ್ಲಿ ಮಾರಾಟವಾದವು ಎಂದು ಸಂತಸ ವ್ಯಕ್ತಪಡಿಸಿದರು.

ಬೇಕರಿ ತಿನಿಸು ಭರ್ಜರಿ ಸೇಲ್

ವಿವಿಯ ಬೇಕಿಂಗ್ ತಂತ್ರಜ್ಞಾನ ಮತ್ತು ಮೌಲ್ಯವರ್ಧನಾ ಸಂಸ್ಥೆಯ ಸುಮಾರು 60 ಉತ್ಪನ್ನಗಳನ್ನು ಸಂತೆಗೆ ತರಲಾಗಿತ್ತು. ಇಷ್ಟೊಂದು ಪ್ರಮಾಣದ ಉತ್ಪನ್ನಗಳು ಹಾಗೂ ವಿದ್ಯಾರ್ಥಿಗಳು ತಯಾರಿಸಿದ್ದ 80 ವಿಧದ ಅಲಂಕಾರಿಕ ಕೇಕ್‌ಗಳೆಲ್ಲಾ ಪೂರ್ಣಪ್ರಮಾಣದಲ್ಲಿ ಮಾರಾಟವಾಗಿದ್ದು ವಿಶೇಷವಾಗಿತ್ತು. ಸಂಸ್ಥೆಯ ಮುಖ್ಯಸ್ಥೆ ಡಾ। ಸವಿತಾ, ಸಿರಿಧಾನ್ಯಗಳ ಚಕ್ಕುಲಿ, ನಿಪ್ಪಟ್ಟು, ರಾಗಿಯ ಹಪ್ಪಳ, ಬಿಸ್ಕೆಟ್, ತೆಂಗಿನ ಉಪ ಉತ್ಪನ್ನಗಳು, ವಿವಿಧ ಸುವಾಸನೆಯ ಮಾಲ್ಟ್ ಸೇರಿದಂತೆ ಆಹಾರ ಪದಾರ್ಥಗಳನ್ನು ಜನರು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದರು ಎಂದು ಖುಷಿ ಹಂಚಿಕೊಂಡರು.

ಸಿರಿಧಾನ್ಯ ಮೌಲ್ಯವರ್ಧನೆಗೆ ಒತ್ತು: ಚಲುವರಾಯಸ್ವಾಮಿ ಶ್ಲಾಘನೆ

ಕೃಷಿ ವಿವಿ ಉತ್ಪಾದಿಸಿದ ಉತ್ಪನ್ನ, ಪರಿಕರ ಪರಿಚಯಿಸಲು 'ಸಂತೆ' · ಅರ್ಧ ದಿನ ಕಾರ್ಯಕ್ರಮದಲ್ಲಿ 15 ಸಾವಿರ ಜನರ ಭೇಟಿ: ವೀಸಿ

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಹೆಚ್ಚು ಒತ್ತು ನೀಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಶ್ಲಾಘಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಶನಿವಾರ ಆಯೋಜಿಸಿದ್ದ 'ಕೃಷಿ ವಿವಿಯ ಉತ್ಪನ್ನಗಳ ಸಂತೆ' ಉದ್ಘಾಟಿಸಿ ಅವರು ಮಾತನಾಡಿದರು. ವಿವಿಯಿಂದ ಅಭಿವೃದ್ಧಿಪಡಿಸಿದ ವಿವಿಧ ತಾಂತ್ರಿಕತೆಗಳ ಉತ್ಪನ್ನ, ಕೃಷಿ ಪರಿಕರಗಳನ್ನು ರೈತರು ಮತ್ತು ಸಾರ್ವಜನಿಕರಿಗೆ ಪರಿಚಯಿಸಲು ಸಂತೆ ಆಯೋಜಿಸಿರುವುದು ಸಂತಸದ ವಿಷಯ. ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಒತ್ತು ನೀಡುತ್ತಿರುವ ಪರಿಣಾಮ ಮಾರುಕಟ್ಟೆ ವಿಸ್ತಾರಗೊಂಡು ಬೆಳೆಗಾರರಿಗೂ ಅನುಕೂಲವಾಗುತ್ತಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕೃಷಿ ವಿವಿಯ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾ ವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳು, ತಂತ್ರಜ್ಞಾನ ಹಾಗೂ ತಾಂತ್ರಿಕತೆಯನ್ನು ಪರಿಚಯಿಸಲು ಮುಂದಾಗಿರುವುದು ಪ್ರಶಂಸನೀಯ ಎಂದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಆಯೋಜಿಸಿದ್ದ 'ಕೃಷಿ ವಿವಿಯ ಉತ್ಪನ್ನಗಳ ಸಂತೆ'ಯನ್ನು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಬುಟ್ಟಿಗೆ ಧಾನ್ಯಗಳನ್ನು ಹಾಕುವ ಮೂಲಕ ಉದ್ಘಾಟಿಸಿದರು. ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ಹಾಜರಿದ್ದರು.

328 ತಳಿ ಅಭಿವೃದ್ಧಿ

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿವಿ ಕುಲಪತಿ ಡಾ। ಎಸ್.ವಿ.ಸುರೇಶ ಮಾತನಾಡಿ, ಬೆಂಗಳೂರು ಕೃಷಿ ವಿವಿಯು ಆರು ದಶಕದ ಸುದೀರ್ಘ ಅವಧಿಯಲ್ಲಿ 485 ತಂತ್ರಜ್ಞಾನ, 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲ ತಳಿಗಳು ಇಂದಿಗೂ ನಾಡಿನ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ವಿವರಿಸಿದರು. ವಿವಿಯ ತಂತ್ರಜ್ಞಾನ, ತಾಂತ್ರಿಕತೆ, ಉತ್ಪನ್ನಗಳನ್ನು ಪರಿಣಾಮಕಾರಿ ಯೋಜನೆಯಡಿ ತಲುಪಿಸಲು ಸಹಾಯಕವಾಗುವಂತೆ ಪ್ರಪ್ರಥಮ ಬಾರಿಗೆ ಸಂತೆ ಆಯೋಜಿಸಲಾಗಿದೆ. ಅರ್ಧ ದಿನದಲ್ಲಿ 15 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿರುವುದಾಗಿ ತಿಳಿಸಿದರು.

ಹೊಸ ದಿಗಂತ
ಭಾನುವಾರ, 23 ಜೂನ್ 2024, ಬೆಂಗಳೂರು

ಕೃಷಿ ಉತ್ಪನ್ನಗಳ ಸಂತೆ: ಸಚಿವ

ಬೆಂಗಳೂರು: ವಿವಿಯಿಂದ ಅಭಿವೃದ್ಧಿಪಡಿಸಿದ ವಿವಿಧ ತಾಂತ್ರಿಕತೆಗಳ ಉತ್ಪನ್ನ, ಕೃಷಿ ಪರಿಕರಗಳನ್ನು ರೈತರು ಮತ್ತು ಸಾರ್ವಜನಿಕರಿಗೆ ಪರಿಚಯಿಸಲು ಕೃಷಿ ಉತ್ಪನಗಳ ಸಂತೆ ಆಯೋಜಿಸಿರುವುದು ಸಂತಸದ ವಿಷಯ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ಶನಿವಾರ ಆಯೋಜಿಸಿದ್ದ ಕೃಷಿ ವಿಶ್ವ ವಿದ್ಯಾಲಯದ ಉತ್ಪನ್ನಗಳ ಸಂತೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧನೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ. ಇದು ಉತ್ತಮ ಬೆಳವಣಿಗೆಯಾಗಿದೆ. ವಿವಿಯಿಂದ ಅಭಿವೃದ್ಧಿಪಡಿಸಿದ ವಿವಿಧ ತಾಂತ್ರಿಕತೆಗಳ ಉತ್ಪನ್ನ, ಕೃಷಿ ಪರಿಕರಗಳನ್ನು ರೈತರು ಮತ್ತು ಸಾರ್ವಜನಿಕರಿಗೆ ಪರಿಚಯಿಸಲು ಸಂತೆ ಆಯೋಜಿಸಿರುವುದು ಸಂತಸದ ವಿಷಯ. ಇದಕ್ಕಾಗಿ ವಿವಿಗೆ ಅಭಿನಂದನೆ ಸಲ್ಲಿಸುತ್ತೇನೆ. ಇದರಿಂದ ಬೆಳೆಗಾರರಿಗೂ ಅನುಕೂಲವಾಗುತ್ತಿದೆ ಎಂದು ಅಭಿಪ್ರಾಯಪಟ್ಟರು.

ಸಂತೆಯು ಪ್ರಾಯೋಗಿಕ ಕಾರ್ಯಕ್ರಮವಾಗಿದ್ದು ರೈತರು, ಸಾರ್ವಜನಿಕರ ಪರವಾಗಿ ವಿವಿಯನ್ನು ಅಭಿನಂದಿಸುತ್ತೇನೆ. ಕೃಷಿ ವಿವಿಯ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾ ವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳು, ತಂತ್ರಜ್ಞಾನ ಹಾಗೂ ತಾಂತ್ರಿಕತೆಯನ್ನು ಪರಿಚಯಿಸಲು ಮುಂದಾಗಿರುವುದು ಪ್ರಶಂಸನೀಯ ಎಂದು ತಿಳಿಸಿದರು.

328 ತಳಿಗಳ ಅಭಿವೃದ್ಧಿ: ಕುಲಪತಿ ಡಾ.ಎಸ್.ವಿ. ಸುರೇಶ ಮಾತನಾಡಿ, ರಾಜ್ಯದ ಪ್ರಪ್ರಥಮ ಕೃಷಿ ವಿವಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಬೆಂಗಳೂರು ಕೃಷಿ ವಿವಿಯು 6 ದಶಕದ ಸುದೀರ್ಘ ಅವಧಿಯಲ್ಲಿ 485 ತಂತ್ರಜ್ಞಾನ, 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲ ತಳಿಗಳು ಇಂದಿಗೂ ನಾಡಿನ ಕೃಷಿಕರಲ್ಲಿ ಜನಪ್ರಿಯವಾಗಿದ್ದು, ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ ಎಂದು ವಿವರಿಸಿದರು.

THE NEW SUNDAY EXPRESS
SUNDAY 23.06.2024

Karnataka Agriculture Minister N Chaluvarayaswamy at a stall at 'Product Santhe' at GKVK Campus, in Bengaluru on Saturday

UAS' Product Santhe attracts 15,000 visitors

EXPRESS NEWS SERVICE
@ Bengaluru

THE University of Agricultural Sciences (UAS) organised its inaugural University of Agricultural Sciences - Product Santhe at the GKVK Campus on Saturday. The event aims to raise awareness among the public, particularly farmers, about the university's activities and products.

N Chaluvarayaswamy, Agriculture Minister and Pro-chancellor of UAS Bangalore, inaugurated the santhe that serves as a platform to showcase a diverse array of products and varieties developed by UAS and promoted by self-help groups. Highlights included seeds, aromatic and medicinal plants, organic jaggery, honey, and value-added products such as silkworm cocoons and banana plants.

Additionally, Rajmudi rice, organic ragi, coconut oil, handmade scented soaps, face creams, vegetable seed packets, jackfruit products, millets, nutritional laddus, bakery products, ready-to-cook powders, mixtures, and pickles were featured attractions.

Over its six-decade history, UAS Bangalore has developed 485 technologies and 328 varieties, which continue to be highly favoured among farmers nationwide, significantly boosting agricultural production in Karnataka.

The event attracted more than 15,000 attendees, comprising both the public and farmers.

தினமலர்
பெங்களூரு | ஞாயிறு | 23.6.2024 www.dinamalar.com

■ கர்நாடகா விவசாய பல்கலைக்கழகம் சார்பில் சுயஉதவி குழுக்களுக்கு பயிற்சி அளிக்கப்பட்டு, அவர்களால் விளைவிக்கப்பட்ட விவசாய பொருட்கள் ஒரு நாள் கண்காட்சியை, விவசாய துறை அமைச்சர் செலுவராயசாமி துவக்கி வைத்தார். இடம்: ஜி.கே.வி.கே., வளாகம், பெங்களூரு. ■ சிறு தானியங்களில் செய்யப்பட்ட உணவுப்பொருட்களை வாங்கி சென்ற பார்வையாளர்கள். ■வாழை தட்டு, ஹேண்ட் பேக போன்ற கைவினை பொருட்கள் பார்வைக்கு வைக்கப்பட்டிருந்தன. ■காய்கறிகளால் அலங்கரிக்கப்பட்ட 'செல்பி ஸ்டேண்டில்' படம் எடுத்து கொண்டனர்.

■ விற்பனைக்காக கொண்டு வரப்பட்ட பலாப்பழங்கள். ■நாட்டு மாடுகள். ■கார, இனிப்பு வகைகள். ■ கண்காட்சிக்கு வந்திருந்த பார்வையாளர்கள்.

ವಿಜಯ ಕರ್ನಾಟಕ
ಭಾನುವಾರ, 23 ಜೂನ್ 2024

ಜಿಕೆವಿಕೆಯಲ್ಲಿ ಕೃಷಿ ಉತ್ಪನ್ನಗಳ ಸಂತೆಗೆ ಚಾಲನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರು ಕೃಷಿ ವಿವಿಯು ಉತ್ಪಾದಿಸಿರುವ ಉತ್ಪನ್ನಗಳ ಎರಡು ದಿನಗಳ ಸಂತೆಗೆ ಜಿಕೆವಿಕೆ ಆವರಣದಲ್ಲಿ ಶನಿವಾರ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಚಾಲನೆ ನೀಡಿದರು.

ಕೃಷಿ ಉತ್ಪನ್ನಗಳ ಸಂತೆಗೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ಸದರಿ ಕೃಷಿ ಸಂತೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ನಾನಾ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನ/ತಾಂತ್ರಿಕತೆಗಳನ್ನು ಪರಿಚಯ ಮಾಡಿಸುವ ನಿಟ್ಟಿನಲ್ಲಿ ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ನಾನಾ ಸಸ್ಯಾಭಿವೃದ್ಧಿ ಸಾಮಗ್ರಿಗಳು, ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ರೇಷ್ಮೆ ಕೃಷಿಯ ಉಪ ಉತ್ಪನ್ನಗಳು, ಅಣಬೆ ಮತ್ತು ಜೇನು ಕೃಷಿ, ವಾಣಿಜ್ಯೀಕರಣ ಉತ್ಪನ್ನಗಳು, ಪಶುಸಂಗೋಪನೆ, ಕೇಕ್ ಪ್ರದರ್ಶನ, ರಾಜಮುಡಿ ಅಕ್ಕಿ, ರಾಸಾಯನಿಕ ಮುಕ್ತ ಬೆಲ್ಲ, ಕೃಷಿ ಪ್ರಕಟಣೆಗಳು ಹಾಗೂ ಇನ್ನೂ ಮುಂತಾದವುಗಳ ಪ್ರದರ್ಶನ ಮತ್ತು ಮಾರಾಟದ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಲಾಗಿದೆ.

ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ ಮಾತನಾಡಿ, ''ಕೃಷಿ ವಿಶ್ವವಿದ್ಯಾನಿಲಯವು ತನ್ನ ಆರು ದಶಕಗಳ ಸುದೀರ್ಘ ಅವಧಿಯಲ್ಲಿ 485 ತಂತ್ರಜ್ಞಾನಗಳು ಹಾಗೂ 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲಾ ತಳಿಗಳು ಇಂದಿಗೂ ನಾಡಿನ ಕೃಷಿಕರಲ್ಲಿ ಜನಪ್ರಿಯವಾಗಿದ್ದು ರಾಜ್ಯದ ಒಟ್ಟಾರೆ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿವೆ,'' ಎಂದರು.

ಸಂಯುಕ್ತ ಕರ್ನಾಟಕ
ಭಾನುವಾರ 23 ಜೂನ್ 2024

ಕೃಷಿ ಉತ್ಪನ್ನ ಜನಪ್ರಿಯತೆಗೆ ಸಂತೆ

ಬೆಂಗಳೂರು: ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯವು ಅಭಿವೃದ್ಧಿಪಡಿಸಲಾದ ವಿವಿಧ ತಾಂತ್ರಿಕತೆಗಳ ಉತ್ಪನ್ನ / ಕೃಷಿ ಪರಿಕರಗಳನ್ನು ಕೃಷಿಕರು ಸೇರಿ ಸಾರ್ವಜನಿಕರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನಪ್ರಿಯಗೊಳಿಸುವ ಸಲುವಾಗಿ "ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಉತ್ಪನ್ನಗಳ ಸಂತೆ" ಎಂಬ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ಸಂತಸದ ವಿಷಯ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ತಿಳಿಸಿದರು.

ಜಿ.ಕೆ.ವಿ.ಕೆ ಆವರಣದಲ್ಲಿ ಆಯೋಜಿಸಿದ್ದ "ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಉತ್ಪನ್ನಗಳ ಸಂತೆ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸದರಿ ಕೃಷಿ ಸಂತೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಹಾಗೂ ಕೃಷಿ ಮಹಾವಿದ್ಯಾನಿಲಯಗಳಲ್ಲಿ ಉತ್ಪಾದಿಸಲಾದ ಕೃಷಿ ಉತ್ಪನ್ನಗಳು ಹಾಗೂ ಕೃಷಿ ತಂತ್ರಜ್ಞಾನ ತಾಂತ್ರಿಕತೆಗಳನ್ನು ಪರಿಚಯ ಮಾಡಿಸುವ ನಿಟ್ಟಿನಲ್ಲಿ ಈ ಸಂತೆ ಆಯೋಜಿಸುತ್ತಿರುವುದು ಪ್ರಗತಿದಾಯಕ ಎಂದು ಹೇಳಿದರು.

ಬಿತ್ತನೆ ಬೀಜಗಳು, ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು ಸಾವಯವ ಉತ್ಪನ್ನಗಳು. ವಿವಿಧ ಸಸ್ಯಾಭಿವೃದ್ಧಿ ಸಾಮಗ್ರಿಗಳು (ಪ್ರಮುಖವಾಗಿ ತೋಟಗಾರಿಕಾ ಬೆಳಗಳಾದ ಹಣ್ಣುಗಳು, ಸುಗಂಧ ಮತ್ತು ಔಷಧೀಯ ಸಸ್ಯಗಳು) ಜೈವಿಕ ಗೊಬ್ಬರಗಳು, ಕೃಷಿ ಯಂತ್ರೋಪಕರಣಗಳು, ಎರೆಹುಳು ಗೊಬ್ಬರ, ಸಸ್ಯ ಸಂರಕ್ಷಣಾ ಜೈವಿಕ ಕೀಟನಾಶಕಗಳು, ಕರಕುಶಲ ವಸ್ತುಗಳು, ಅಡಿಕೆ ಉತ್ಪನ್ನಗಳು, ರೇಷ್ಮೆಕೃಷಿಯ ಉಪ ಉತ್ಪನ್ನಗಳಿಗೆ ಒತ್ತು ನೀಡುತ್ತಿರುವುದು ಉತ್ತಮ ಬೆಳವಣಿಗೆ. ಸಾರ್ವಜನಿಕರು ಅದರಲ್ಲೂ ಮುಖ್ಯವಾಗಿ ರೈತ ಬಾಂಧವರು ಸಂತೆಯ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ಮಾತನಾಡಿ, ಕೃಷಿ ವಿಶ್ವವಿದ್ಯಾನಿಲಯವು ತನ್ನ ಆರು ದಶಕಗಳ ಸುಧೀರ್ಘ ಅವಧಿಯಲ್ಲಿ 485 ತಂತ್ರಜ್ಞಾನಗಳು ಹಾಗೂ 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ಈ ಎಲ್ಲಾ ತಳಿಗಳು ಇಂದಿಗೂ ನಾಡಿನ ಕೃಷಿಕರಲ್ಲಿ ಜನಪ್ರಿಯವಾಗಿದ್ದು ರಾಜ್ಯದ ಒಟ್ಟಾರೆ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ನಿರ್ಣಾಯಕ ಪಾತ್ರವಹಿಸಿವೆ. ಇದಲ್ಲದೆ ವಿಶ್ವವಿದ್ಯಾನಿಲಯ ಅಭಿವೃದ್ಧಿಪಡಿಸಿರುವ ಹಲವು ಸುಧಾರಿತ ತಳಿಗಳು ರಾಜ್ಯ ಮತ್ತು ರಾಷ್ಟ್ರದ ಗಡಿದಾಟಿದ್ದು 400 ಕ್ವಿಂಟಾಲ್‌ಗಿಂತ ಹೆಚ್ಚು ಸೂರ್ಯಕಾಂತಿ ಬೀಜಗಳನ್ನು ಈಸ್ಟ್ ಆಫ್ರಿಕನ್ ಸೀಡ್ ಲಿಮಿಟೆಡ್ ಕಂಪನಿ ಮೂಲಕ ಆಫ್ರಿಕಾ ದೇಶಗಳಿಗೆ ವಿಶೇಷವಾಗಿ ಉಗಾಂಡಾ ದೇಶಕ್ಕೆ ರಫ್ತು ಮಾಡಲಾಗುತ್ತಿದೆ ಎಂದರು. ವಿವಿ ವ್ಯವಸ್ಥಾಪನಾ ಮಂಡಳಿ ಸದಸ್ಯರು, ಅಧಿಕಾರಿಗಳು, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಂತೆಯಲ್ಲಿ ಭಾಗವಹಿಸಿದ್ದರು.

ಪ್ರಜಾವಾಣಿ
ಭಾನುವಾರ • ಜೂನ್ 23, 2024



ಜಿಕೆವಿಕೆ ಆವರಣದಲ್ಲಿ ಶನಿವಾರ ನಡೆದ ಉತ್ಪನ್ನಗಳ ಸಂತೆಯಲ್ಲಿ ತರಕಾರಿ ಸೆಲ್ಫಿ ಪಾಯಿಂಟ್‌ನಲ್ಲಿ ಯುವತಿಯರು ಫೋಟೊ ತೆಗೆಸಿಕೊಂಡರು
– ಪ್ರಜಾವಾಣಿ ಚಿತ್ರ

'ಉತ್ಪನ್ನಗಳ ಸಂತೆ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಉತ್ಪನ್ನಗಳ ಸಂತೆ'ಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಶನಿವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ವಿವಿಧ ಕೃಷಿ ಸಂಶೋಧನಾ, ವಿಸ್ತರಣೆ ಕೇಂದ್ರಗಳಲ್ಲಿ ಉತ್ಪಾದಿಸಿದ ಕೃಷಿ ಉತ್ಪನ್ನಗಳು, ಕೃಷಿಗೆ ಸಂಬಂಧಿಸಿದ ತಂತ್ರಜ್ಞಾನ ರೈತರಿಗೆ ಪರಿಚಯಿಸಲು ಈ ಸಂತೆ ವೇದಿಕೆಯಾಗಿದೆ' ಎಂದು ಹೇಳಿದರು.

ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, 'ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಇದುವರೆಗೆ 485 ತಂತ್ರಜ್ಞಾನಗಳು, 328 ತಳಿಗಳನ್ನು ಅಭಿವೃದ್ಧಿಪಡಿಸಿದೆ. ರಾಜ್ಯದ ಒಟ್ಟಾರೆ ಕೃಷಿ ಉತ್ಪಾದನೆ ಹೆಚ್ಚಿಸುವಲ್ಲಿ ಇದು ನಿರ್ಣಾಯಕ ಪಾತ್ರ ವಹಿಸಿದೆ. ಆಧುನಿಕ ಉಪಕರಣಗಳು ಹಾಗೂ ಉತ್ಪನ್ನಗಳು ಏಕಗವಾಕ್ಷಿಯಡಿಯಲ್ಲಿ ತಲುಪಿಸಲು ಉತ್ಪನ್ನಗಳ ಸಂತೆ ಸಹಕಾರಿ ಆಗಲಿದೆ' ಎಂದರು.

ఈనాడు
ఆదివారం జూన్ 23, 2024

వ్యవసాయ విశ్వవిద్యాలయ సంత షురూ

పండ్లను రుచి చూస్తూ పరిశోధన విద్యార్థితో మాట్లాడుతున్న మంత్రి చెలువరాయస్వామి

బెంగళూరు (యశ్వంతపుర), న్యూస్‌టుడే : బెంగళూరు వ్యవసాయ విశ్వవిద్యాలయం క్షేత్రాల్లో పండించిన ఆహార ధాన్యాలు, పండ్లు, కూరగాయల ప్రదర్శన-సంతను శనివారం జీకేవీకే ఆవరణలో వ్యవసాయ శాఖ మంత్రి చెలువరాయస్వామి ప్రారంభించారు. ఈ పంటలను నగరవాసులకు పరిచయం చేయడంతో పాటు వాటిని విక్రయించేందుకు ఇక నుంచి ప్రత్యేక సంత నిర్వహించాలని విశ్వవిద్యాలయం తీర్మానించినట్లు ఇదే సందర్భంగా మంత్రి వెల్లడించారు. పరిశోధనలకు ఈ క్షేత్రాలు నిలయాలుగా మారుతున్నాయని సంతోషం వ్యక్తం చేశారు. ఉపకులపతి డాక్టర్ ఎస్.వి. సురేష్ మాట్లాడుతూ వ్యవసాయ విశ్వవిద్యాలయం ఇప్పటి వరకు 485 సాంకేతిక పరిజ్ఞానాలు, 328 వంగడాలను అభివృద్ధి చేసినట్లు వివరించారు. కొత్త వంగడాల సాయంతో రైతులు ఎక్కువ దిగుబడి సాధిస్తున్నారని సంతోషం వ్యక్తం చేశారు. నాలుగు వందల క్వింటాళ్ల సూర్యకాంతి విత్తనాలను ఉగాండా దేశానికి ఎగుమతి చేశామని, జొన్న, వరి, రాగి, కంది, చిరుధాన్యాల విత్తనాలను మహారాష్ట్ర, తెలంగాణ, గుజరాత్, మధ్యప్రదేశ్, ఆంధ్రప్రదేశ్ ఛత్తీస్‌ఘడ్, తమిళనాడు, ఒడిశా, బిహార్, పశ్చిమబెంగాల్ తదితర రాష్ట్రాలకు రవాణా చేసినట్లు వివరించారు. ఉదయం ఏడు గంటలకు సంత ప్రారంభమైంది. ఉదయవేళ నడకకు ఇక్కడికి వచ్చేవారు తమకు ఇష్టమైన పండ్లు, కూరగాయలు, చిరుధాన్యాలను కొనుగోలు చేశారు. జీకేవీకే ఆవరణలో పండిన పంటలను ఇకపై సంతలో విక్రయిస్తారు. ప్రతి ఆదివారం సంత నిర్వహిస్తే బాగుంటుందని స్థానికులు సూచించారు.

జీకేవీకే తోటల్లో పండిన కూరగాయల ప్రదర్శనలో ఓ భాగం